ಶ್ರೀ ಸಿ.ಎಂ. ಇಬ್ರಾಹಿಂ—ಬಡ್ಜೆಟ್ ಮೇಲಿನ ಸಾಮಾನ್ಯ ಚರ್ಚೆ ಶುರುವಾಗುವುದಕ್ಕೆ ಮುನ್ನ ನನ್ನದೊಂದು ಸಣ್ಣ ಮನವಿ. ನಾನು ಸುಮಾರು ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗಳನ್ನು ಕಳುಹಿಸಿದ್ದೇನೆ. ಮತ್ತು ಪ್ರಶ್ನೆಗಳನ್ನು ಕಳುಹಿಸಿದ್ದೇನೆ. ಆದರೆ ಇದುವರೆಗೂ ಒಂದು ಪ್ರಶ್ನೆಗೂ ಸರ್ಕಾರದಿಂದ ಉತ್ತರ ಬಂದಿಲ್ಲ. ಮತ್ತು ಕಬ್ಬು ಬೆಳೆಯುವವರ ಬಗ್ಗೆ ೩೪೦ ರೂಪಾಯಿಗಳ ಟ್ಯಾಕ್ಸ್ ಹಾಕಿರುತ್ತಾರೆ ಅದರ ಬಗ್ಗೆ ಪ್ರಶ್ನೆಗಳನ್ನು ಕಳುಹಿಸಿದ್ದೇನೆ. ಆದನ್ನು ಯಾವಾಗ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು—ಇಂತಹ ವಿಚಾರಗಳು ಏನಾದರೂ ಇದ್ದರೆ ನನ್ನ ಕಡೆ ಬಂದು ಮಾತನಾಡಿ. It will be posted on Monday.

11-30 A.M.

Budget Estimates for 1978—79

General Discussion (Debate Continued).

CHAIRMAN (Smt. Sumati B. Madiman) in the Chair.

†ಶ್ರೀ ಆನಂದ ಕುಂದ ಹೆಗ್ಡೆ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ನಾವು ಇಷ್ಟರವರೆಗೂ ಗುಡುಗು, ಮಿಂಚು ಮತ್ತು ಸಿಡಿಲು ಈ ಸಭೆಯಲ್ಲಿ ಕಂಡ ಹಾಗಾಯಿತು ಈಗ ಮಳೆ, ಆ ದೃಷ್ಟಿಯಿಂದ ನಿಮ್ಮ ರಕ್ಷಣೆಯ ಹಿನ್ನೆಲೆಯಲ್ಲಿ ನಮ್ಮ ೧೯೭೮ ೭೯ನೇ ಮುಂಗಡ ಪತ್ರ ಬಗ್ಗೆ ಕೆಲವು ಮಾತುಗಳನ್ನು ಆಡುತ್ತೇನೆ. ಅದಕ್ಕೆ ಪೂರ್ವಭಾವಿಯಾಗಿ ನಮ್ಮ ಅರ್ಥಮಂತ್ರಿಗಳವರು ಕೆಲವು ಮಾತುಗಳನ್ನು ಬಡ್ಜೆಟ್‌ನಲ್ಲಿ ಹೇಳಿದ್ದಾರೆ ಅದನ್ನು ಉಲ್ಲೇಖಿಸುವುದಾದರೆ, "ಬಜೆಟು ಆರ್ಥಿಕ ಮತ್ತು ಸಾಮಾಜಿಕ ನೀತಿಯನ್ನು ರೂಪಿಸುವಲ್ಲಿ ಮತ್ತು ನಮ್ಮ ಉದ್ದೇಶಗಳ ಸಾಧನೆಯಲ್ಲಿ ಒಂದು ಪ್ರಭಲ ಮಾಧ್ಯಮವಾಗಿದೆ...... ಈ ದೃಷ್ಟಿಯಿಂದ ಈ ಬಡ್ಜೆಟ್‌ನಲ್ಲಿ ನಾನು ಸರ್ಕಾರದ ತಾತ್ವಿಕ, ಆರ್ಥಿಕ ಮತ್ತು ಸಾಮಾಜಿಕ ನೀತಿಯ ಅಂಶಗಳನ್ನು ಪ್ರತಿಬಿಂಬಿಸುವ ಅನೇಕ ಕಾರ್ಯಕ್ರಮಗಳನ್ನು ಅಳವಡಿಸಿದ್ದೇನೆ" ಎಂದು ಹೇಳಿದ್ದಾರೆ. ಆ ರೀತಿಯಾಗಿ ಅವರು ಹೇಳಿರತಕ್ಕದ್ದೆಲ್ಲಾ ಪೂರಕವಾಗಿದೆ, ಪೋಷಕವಾಗಿದೆ. ನಮ್ಮ ರಾಜ್ಯದಲ್ಲಿ ಮೂರು ಮುಕ್ಕಾಲು ಕೋಟಿ ಜನತೆ ಇದೆ ನಮಗೆ ಸರಾಸರಿಯಲ್ಲಿ ಇವತ್ತು ೨೦೦ ರೂಪಾಯಿ ಮುಂಗಡ ಪತ್ರವನ್ನು ಹಾಕಿರುವುದರಿಂದ ಪ್ರತಿಯೊಬ್ಬರ ತಲೆಗೆ ಬರುತ್ತದೆ ಈ ಹಿಂದೆ ಕೂಡ ೧೯೭೨ನೇ ಇಸ್ವಿಯಲ್ಲಿ ಸರಾಸರಿ ೫೮೦ ಇದ್ದುದು ೧೯೭೭-೭೮ಕ್ಕೆ ಅದು ಸರಾಸರಿ ೭೮೦ ರೂಪಾಯಿಗಳಿಗೆ ಮುಟ್ಟಿದೆ. ಇದು ಕೂಡ ಅಪ್ರಗತಿಯಿಂದ ಪ್ರಗತಿಯ ಕಡೆಗೆ, ಅನಭಿವೃದ್ಧಿಯಿಂದ ಅಭಿವೃದ್ಧಿಯ ಕಡೆಗೆ ವರಮಾನವನ್ನು ಹೆಚ್ಚಿಸುವುದರಲ್ಲಿ ಈ ಮುಂಗಡ ಪತ್ರವೂ ಕೂಡ ಸಮರ್ಥವಾಗಿದೆ. ಆ ದೃಷ್ಟಿಯಿಂದ ನಮ್ಮ ಗ್ರಾಮಾಂತರ ಜನಜೀವನವು ಉನ್ನತಿ ಹೊಂದುವ ದೃಷ್ಟಿಯಿಂದ ನಮ್ಮ ಅರ್ಥ ಮಂತ್ರಿಗಳವರು ಬಹಳ ಒಳ್ಳೆಯ ಸಮರ್ಥನೀಯವಾದ ಮುಂಗಡ ಪತ್ರವನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಜೊತೆಯಲ್ಲಿ ಇದರಲ್ಲಿ ಸ್ವಾಗತಿಸುವ ಅಂಶವೇನಿದೆ ಎಂದರೆ ಈ ಬಡ್ಜೆಟ್‌ನಲ್ಲಿ ೧೯೭೮-೭೯ ರಲ್ಲಿ ಹೊಸ ತೆರಿಗೆಗಳು ಇಲ್ಲ. ಪ್ರತಿ ವರ್ಷ ಮುಂಗಡ ಪತ್ರದಲ್ಲಿ ಹೊಸ ತೆರಿಗೆಯನ್ನು ಹಾಕುವಾಗ ಆರ್ಥಿಕವಾಗಿ ಮುಂದುವರಿಯುತ್ತಿರುವ ದೇಶದಲ್ಲಿ ಅದು ಒಂದು ಸಂಪ್ರದಾಯ ಬದ್ಧವಾಗಿ. ನಿಯಮಿತವಾಗಿ, ಯಾವಾಗಲೂ ವಸ್ತು ನಿಷ್ಟೆಯಿಂದ, ವಿಷಯ ನಿಷ್ಟೆಯಿಂದ ತೆರಿಗೆಗಳನ್ನು ಹಾಕುವಾಗ ಯಾವ ರೀತಿಯಾಗಿ ತೆರಿಗೆಯನ್ನು ಹಾಕಬೇಕೆಂದು ನಮ್ಮ ಅರ್ಥ ಶಾಸ್ತ್ರದಲ್ಲಿಯೇ ಹೇಳಿದ್ದಾರೆ. ಅದು ಏನೆಂದರೆ ಬುದ್ಧಿವಂತನಾದವನು ಅವರವರ ಹತ್ತಿರ ತನ್ನ ಆರ್ಥಿಕ ಸಮಾನತೆಯನ್ನು ಉಳಿಸಿಕೊಂಡು ಹೋಗುತ್ತಾನೆ, ಬೆಳಸಿಕೊಂಡು ಹೋಗುತ್ತಾನೆಂದು ಹೇಳಿದ್ದಾರೆ. ಆ ನೆರೆಯಲ್ಲಿ ಇದನ್ನು ನಾವು ನೋಡುವುದಾದರೆ ಸಮರ್ಥನವಾಗಿದೆ. ನಾವು ಯಾವಾಗಲೂ ಶಾಸ್ತ್ರವನ್ನು ಅಳವಡಿಸಬೇಕು. ಚಾಣಕ್ಯನ ಆರ್ಥಿಕ ಶಾಸ್ತ್ರದಲ್ಲೂ ಹೂವಿನಲ್ಲಿ ಇರುವ ಮಧುರವನ್ನು ನೊಣ ಹೇಗೆ ಅದರ ಸೌಂದರ್ಯವನ್ನು ಹಾಳು ಮಾಡದೇ ಕುಡಿಯುತ್ತದೆಯೋ ಹಾಗೆ ಜನರ ಮೇಲೆ ತೆರಿಗೆಯನ್ನು ಹಾಕಬೇಕೆಂದು ಹೇಳಿದ್ದಾನೆ. ಹಾಗೆಯೇ ಆ ಪದ್ಧತಿಯನ್ನು ಅಳವಡಿಸಿಕೊಳ್ಳುವುದರಲ್ಲಿ, ಆ ನೆರೆಯಲ್ಲಿಯೇ ಪ್ರಯತ್ನವನ್ನು ನಮ್ಮ ಅರ್ಥ ಮಂತ್ರಿಗಳವರು ಮಾಡಿದ್ದಾರೆ.

ಶ್ರೀ ಎಂ. ಮಳ್ಳೂರು ಆನಂದರಾವ್.—ದುಂಬಿ, ನೊಣ ಮಧುವನ್ನು ಹೀರುವಂತೆ ಮಾಡಬೇಕೆಂದು ತಾವು ಸಲಹೆ ಕೊಡುತ್ತಿದ್ದೀರಿ ಅದರೆ ನಮ್ಮ ಸರ್ಕಾರ ರಕ್ತದ ತರಹ ಹೀರುತ್ತಿದ್ದಾರೆ.

ಶ್ರೀ ಆನಂದ ಕುಂದ ಹೆಗಡೆ.—ವಾದಗ್ರಸ್ಥ ವಿಚಾರಗಳು ಪ್ರಪಂಚದಲ್ಲಿ ಇದ್ದೆ ಇರುತ್ತವೆ. ಆದುದರಿಂದ ಇವತ್ತು ಮಾನ್ಯ ಅರ್ಥ ಮಂತ್ರಿಗಳು ಮಂಡಿಸಿದತಕ್ಕದು. ಒಂದು ಉನ್ನತ ಹಿನ್ನೆಲೆಯಲ್ಲಿ ಬಹಳ ಸಮರ್ಥಕವಾಗಿ, ವಸ್ತು ನಿಷ್ಠೆಯಾಗಿದೆ, ವಿಷಯ ನಿಷ್ಠೆಯಾಗಿ ಅಷ್ಟೇ ಮಾತ್ರವಲ್ಲ ವಿಚಾರಗಳೂ ಕೂಡ ಪೋಶಕವಾಗಿದೆ ಮತ್ತು ಪೂರಕವಾಗಿದೆ. ಒಳ್ಳೆಯ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ ಆದನ್ನು ಸಂಕ್ಷೇಪಿಸಿ ಹೇಳುವುದಾದರೆ ದುರ್ಬಲವರ್ಗದವರಿಗೆ, ಭೂ ಹೀನರಿಗೆ ವಸತಿ ಯೋಜನೆ, ಪ್ರತಿ ಮನೆಗೆ ೨,೫೦೦ ರೂಪಾಯಿಗಳ ವೆಚ್ಚದಲ್ಲಿ ಇದುವರೆಗೆ ೭೪,೧೪೬ ಮನೆಗಳನ್ನು ನಿರ್ಮಿಸಿದ್ದಾರೆ ಜೊತೆಯಲ್ಲಿ ೧೦ ಸಾವಿರ ರೂ. ಒಳಗಿನವರಿಗೆ ಉಚಿತ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡಿದ್ದಾರೆ. ಮತ್ತು ಹಿಡುವಳಿದಾರರಿಗೆ ಮಧ್ಯಮಾವಧಿ ಸಾಲ, ಧೀರ್ಘಾವಧಿ ಸಾಲ, ಅಲ್ಪಾವಧಿ ಸಾಲದ ಯೋಜನೆಗಳನ್ನು ಕೂಡ ಮಾಡಿಕೊಟ್ಟು ಅನುಕೂಲಗಳನ್ನು ಒದಗಿಸಿಕೊಟ್ಟಿದ್ದಾರೆ. ಮೊದಲಿಗಿಂತ ಹೆಚ್ಚಿಗೆ ಸಾಧಿಸಿಕೊಂಡು ಬಂದಿದ್ದೇವೆ ಎನ್ನುವ ವಿಚಾರವನ್ನು ಈ ಬಡ್ಜೆಟ್‌ನ ಮೂಲಕ ನಾವು ಸ್ವಾಗತಿಸಿದರೂ ಕೂಡ. ಇನ್ನೂ ನಾವು ಸಾಧಿಸಲಿಕ್ಕೆ ಬಹಳಷ್ಟು ಇದೆ, ಸಮಸ್ಯೆಗಳು ಅಷ್ಟೇ ಇವೆ. ಅದಕ್ಕೆ ನನ್ನ ಕೆಲವು ಸಲಹೆಗಳನು ಕೊಡಬಯಸುತ್ತೇನೆ. ಮೊದಲನೆಯದಾಗಿ ಈಗ ವರಾಹಿ ವಿದ್ಯುತ್ ಯೋಜನೆಯ ಒಂದು ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ ಇದು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ್ದು. ಈ ವಿದ್ಯುತ್ ಯೋಜನೆಯೂ ನಾವು ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದಾಗಲೇ ಈ ನೀರಾವರಿ ಯೋಜನೆಯನ್ನು ಮಾಡಿದ್ದರು. ನಾವು ಇದಕ್ಕೆ ಹಾಲಹಿ ಯೋಜನೆಯೆಂದು ಕರೆಯುತ್ತಿದ್ದೆವು ಅದಕ್ಕೆ ಇವತ್ತು ವರಾಹಿ ಯೋಜನೆಯೆಂದು ಕರೆಯುತ್ತಿದ್ದಾರೆ. ನಮ್ಮ ಕರಾವಳಿ ಪ್ರದೇಶಗಳಲ್ಲಿರುವ ಕಾಳಿ ನದಿ, ಶರಾವತಿ ಎಲ್ಲಾ ನದಿಗಳು ಕೂಡ ಪ್ರಪಾತದಿಂದ ಕೆಳಕ್ಕೆ ಧುಮುಕುವುದರಿಂದ ವಿದ್ಯುತ್‌ನ್ನು ಸಂಗ್ರಹಿಸುತ್ತಿದ್ದಾರೆ ಆದರಿಂದ ರೈತರಿಗೆ ಕೃಶಿಗೆ ಅನುಕೂಲವಾಗುತ್ತಿಲ್ಲ. ಅದು ಅವನಿಗೆ ಪೂರಕ, ಪೋಶಕವಾಗಿಲ್ಲ. ಇವತ್ತು ನೀವು ವರಾಹಿ ಯೋಜನೆಯಿಂದ ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತಿದ್ದೀರಿ, ಆದರೆ ಆ ನೀರನ್ನು ರೈತರು ಕೃಶಿಗೆ ಉಪಯೋಗಿಸಲಿಕ್ಕೆ ಅವಕಾಶವಿಲ್ಲದಂತೆ ಆಗಿದೆ. ಆ ಹಿನ್ನೆಲೆಯಲ್ಲಿ ೧೯೫೬ ರಲ್ಲಿಯೇ ನಮ್ಮ ಕರ್ನಾಟಕಕ್ಕೆ ಸೇರುವ ಮೊದಲೇ ಅದರ ಬಗ್ಗೆ ಒಂದು ಯೋಜನೆ ತಯಾರಾಗಿತ್ತು. ಅಲ್ಲಿಂದ ಇಲ್ಲಿಯ ವರೆಗೂ ಆ ನೀರನ್ನು ಕೃಶಿಕರು ಬಳಸಿಕೊಳ್ಳುವುದಕ್ಕೆ ಅವಕಾಶವಾಗಿಲ್ಲ. ನೀವು ವಿದ್ಯುತ್‌ನ್ನು ಉತ್ಪಾದನೆ ಮಾಡುತ್ತಿದ್ದೀರಿ ಅದನ್ನು ಸಮರ್ಥನೆ ಮಾಡುತ್ತೇನೆ ಮತ್ತು ಅದು ಅಗತ್ಯವಿದೆ ಅದರ ಜೊತೆಯಲ್ಲಿ ನೀರಾವರಿಗೂ ಕೂಡ ಅನುಕೂಲ ಮಾಡಿಕೊಟ್ಟಿದ್ದರೆ ಆದರಿಂದ ಕೃಶಿಗೆ ಬಹಳ ಅನುಕೂಲ ವಾಗುತ್ತಿತ್ತು ಎಂದು ಹೇಳುತ್ತೇನೆ. ಅದಕ್ಕಾಗಿ ಈ ಆರ್ಥಿಕ ವರ್ಷದಲ್ಲಿ ತನ್ನ ಮಹತ್ವವನ್ನು ಉಳಿಸಿ ಕೊಳ್ಳಲಿಲ್ಲ, ಚಕ್ರ, ಕಾಳಿ ನದಿ ಯೋಜನೆ ಮುಂತಾದವುಗಳನ್ನು ತೆಗೆದುಕೊಂಡಿದ್ದೀರಿ ಹಾಗೆಯೇ ಕೃಷ್ಣ ಮೇಲ್ದಂಡೆ ಯೋಜನೆ, ಕೆಳದಂಡೆ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ. ಆದರೆ ಕೃಶಿಕರಿಗೂ ಪೂರಕವಾಗುವಂಥಾ ಉಭಯಕುಶಲೋಪರಿಯಾದ ವರಾಹಿ ಯೋಜನೆ ಅತ್ಯಂತ ಮಹತ್ವದಿಂದ ಕೂಡಿರುವುದರಿಂದ ಕಳೆದ ೨೦ ವರ್ಷಗಳಿಂದ ಇದು ಆಗುತ್ತದೆಂದು ನಾವು ಕಾಯುತ್ತಲೇ ಇದ್ದೇವೆ. ಅದಕ್ಕಾಗಿ ಈಗಲಾದರೂ ತಾವು ಅದಕ್ಕೆ ಅತ್ಯಂತ ಹೆಚ್ಚಿನ ಮಹತ್ವ ಕೊಡಬೇಕೆಂದು ನನ್ನ ಸೂಚನೆ.

ಇನ್ನು ಭೂ ಸುಧಾರಣೆ—ಇದು ಬಹಳ ಪರಿಣಾಮಕಾರಿಯಾದ ಪಾತ್ರವನ್ನು ನಿರ್ವಹಿಸಿದೆ. ಭೂ ವಿತರಣೆಯನ್ನು ಮಾಡುತ್ತಿದ್ದೀರಿ. ಮತ್ತು ರೈತರಿಗೆ ಮಧ್ಯಮಾವಧಿ, ಧೀರ್ಘವಾದಿ ಮತ್ತು ಅಲ್ಪಾವಧಿ ಸಾಲದ ಯೋಜನೆಗಳನ್ನು ಕೈಗೊಂಡಿದ್ದೀರಿ ಮತ್ತು ರೈತರಿಗೆ ಬೀಜ ಗೊಬ್ಬರ ಸಕಾಲಕ್ಕೆ ಸಿಗುವಂಥ ಕಾರ್ಯಕ್ರಮಗಳನ್ನು ರೂಪಿಸಿದ್ದೀರಿ ಇದು ಬಹಳ ಅವಶ್ಯಕ. ಇದರ ಜೊತೆಗೆ ನನ್ನ ಒಂದು ಸಲಹೆ ಕೊಡುವುದೇನೆಂದರೆ ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಆಗಲೀ ಉತ್ತರ ಕನ್ನಡ ಜಿಲ್ಲೆಗೇ ೨೦ ಲಕ್ಷ ರೂಪಾಯಿಗಳನ್ನು ಸಹಾಯ ಧನವಾಗಿ ಅಭಿವೃದ್ಧಿಗಾಗಿ ಕೊಟ್ಟಿದ್ದೀರಿ ಆ ರೀತಿ ಕೊಡುವುದರಲ್ಲಿ ಅರ್ಥವಿದೆ. ಮತ್ತು ಕಾರಣವೂ ಇದೆ. ಅದು ಏನೆಂದರೆ ಭೂ ತೆರಿಗೆಯಲ್ಲಿ ಕಲೆಕ್ಟ್ ಆದುದರಲ್ಲಿ ತಾಲ್ಲೂಕ್ ಬೋರ್ಡ್‌ಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ, ಪಂಚಾಯಿತಿಗಳಿಗೆ ಕೊಡುತ್ತಿದ್ದನ್ನು ನಿಲ್ಲಿಸಿದ್ದಿರಿ ಈಗ ಈ ರೀತಿಯಾಗಿ ಸಹಾಯ ಧನವಾಗಿ ಕೊಟ್ಟಿರುವುದು ನಿಜವಾಗಿಯೂ ಒಳ್ಳೆಯ ಕೆಲಸ. ಅದೇರೀತಿ ದಕ್ಷಿಣ ಕನ್ನಡ ಜಿಲ್ಲೆಗೂ ಕೂಡ ಕೊಡಬೇಕಾದ ಅಗತ್ಯವಿದೆ. ನಮಗೂ ಕೂಡ ೨೫ ಲಕ್ಷ ರೂಪಾಯಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸಿಗುವಂತೆ ಏರ್ಪಾಡು ಮಾಡಬೇಕು. ಸರ್ಕಾರಿ ನೌಕರರಿಗೆ ಬವಣೆ ಭತ್ಯ ಕೊಡುವುದಾಗಿ ಬಡ್ಜೆಟ್ಟಿನಲ್ಲಿ ಕಾಣಿಸಿದ್ದೀರಿ. ಇದು ಸ್ವಾಗತಾರ್ಹ. ಅದನ್ನು ನಮ್ಮ ರಾಜ್ಯದ ಅಧ್ಯಾಪಕವರ್ಗದವರಿಗೂ ಸಿಗುವಂತೆ ಸಹಕರಿಸಬೇಕು ಅಧ್ಯಾಪಕವರ್ಗದವರಿಗೂ ಅದು ಸಿಗುವಂತಾಗಬೇಕು ಎಂಬುದು ನನ್ನ ಸೂಚನೆ. ಈ ಭಾಷಾವಾರಿನ ಪ್ರಶ್ನೆ ನಮ್ಮ ದೇಶದಲ್ಲಿ

ನಿರಂತರ ಸಮಸ್ಯೆಯಾಗಿದ್ದು ಅದರ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದವರು ಘಟನಾಬದ್ಧವಾದ ನಿರ್ಣಯವನ್ನು ತೆಗೆದುಕೊಂಡಿದ್ದರೂ ಕೂಡ ನಮ್ಮ ಬೆಳಗಾಂ ಮತ್ತು ಕಾಸರಗೋಡಿನ ಗಡಿ ಸಮಸ್ಯೆ ಇನ್ನೂ ಅನಿಶ್ಚತವಾಗಿಯೇ ಇದೆ. ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಜೊತೆಗೆ ಹೊಂದಾಣಿಕೆ ಮಾಡಿ ಕೊಂಡು ಮಹಾಜನ್ ವರದಿಯಂತೆ ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳುವಂತೆ ಮಾಡ ಬೇಕೆಂದು ನನ್ನ ಸಲಹೆ. ನಮ್ಮ ಕರ್ನಾಟಕದಲ್ಲಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಎಂದು ಎರಡು ಜಿಲ್ಲೆಗಳಿವೆ. ನಮ್ಮ ಕರಾವಳಿ ೧೮೦ ಮೈಲಿ ಉದ್ದ ಇದೆ. ಅಲ್ಲಿ ಮಳೆಗಾಲದಲ್ಲಿ ಸಮುದ್ರದ ಕೊರೆತ ಹೆಚ್ಚಾಗಿದ್ದು ಅದಕ್ಕೆ ನಮಗೆ ಯೋಗ್ಯವಾದ ರಕ್ಷಣೆ ಮಾಡಲು ಕೇಳಿಕೊಂಡಗೂ ರಕ್ಷಣೆ ಸಿಕ್ಕಿಲ್ಲ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಸಮುದ್ರದ ಕೊರತೆ ಇರುವುದರಿಂದ ಕೆಲವು ಮನೆಗಳು ಬಿದ್ದು ಹೋಗಿವೆ, ತೆಂಗಿನಮರಗಳು ಬಿದ್ದು ಹೋಗಿವೆ. ಆದ್ದರಿಂದ ವಸತಿಸೌಕರ್ಯ ಇವೆಲ್ಲದಕ್ಕೂ ಸಮಸ್ಯೆಯಾಗಿದೆ. ಕೇರಳಕ್ಕೆ ಸಾಕಷ್ಟು ಧನಸಹಾಯ ಮಾಡುವುದರ ಮೂಲಕ ಕೇಂದ್ರವರು ಸಹಾಯ ಮಾಡಿದ್ದಾರೆ. ಅಲ್ಲಿ ಕಾಮಗಾರಿಗಳನ್ನು ಮಾಡುವುದರ ಮೂಲಕ ನೆರೆ ಸಂತ್ರಸ್ತರಿಗೆ ಸಹಾಯ ಮಾಡಿದ್ದಾರೆ. ನೆರೆ ಹಾಗೂ ಕರಾವಳಿಯಲ್ಲಿನ ಕೊರೆತದ ರಕ್ಷಣೆಗೆ ಕೇಂದ್ರ ಸರ್ಕಾರ ರಾಜ್ಯದ ಸಂಪನ್ಮೂಲಗಳ ಮೂಲಕ ರಕ್ಷಣೆ ಕೊಡದೇಹೋದರೆ ವರ್ಷೇ ವರ್ಷೇ ಅನಾಹುತಗಳು ಜಾಸ್ತಿಯಾಗುವುದರ ಮೂಲಕ ಹಾನಿಯುಂಟಾಗು ತ್ತದೆ. ಈ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕು. ನನ್ನ ಮತದಾರರ ಕ್ಷೇತ್ರವಾದ ಬ್ರಹ್ಮಾವರದಲ್ಲಿ ಒಂದು ಸಬ್ ಟ್ರೆಜರಿ ಆಗುವ ಅಗತ್ಯವಿದೆ. ಆದ್ದರಿಂದ ಬ್ರಹ್ಮಾವರಕ್ಕೆ ಒಂದು ಸಬ್ ಟ್ರೆಜರಿ ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಅರ್ಥ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಛೇರ್ಮನ್‌ರವರು.—ವೇಳೆ ಆಯಿತು, ಬೇಗ ಮುಗಿಸಿ.

ಶ್ರೀ ಆನಂದ ಕುಂದ ಹೆಗಡೆ.—ಮಾನ್ಯ ಅಧ್ಯಕ್ಷಿಣಿಯರ ಮಾತಿಗೆ ಗೌರವ ಕೊಟ್ಟು ಇಷ್ಟು ಮಾತ ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಕುಮಾರಿ ಎಸ್. ಪ್ರಮೀಳ(ಚಾಮರಾಜಪೇಟೆ).-ಮಾನ್ಯ ಸಭಾಅಧ್ಯಕ್ಷಿಣಿಯವರೇ, ಮಾನ್ಯ ಅರ್ಥ ಮಂತ್ರಿಗಳು ಸಭೆಯ ಮುಂದೆ ಬಜೆಟ್ ಏನು ಇಟ್ಟಿದ್ದಾರೆ ಇದು ನಿಜವಾಗಿ ಸಮಗ್ರ ಕರ್ನಾಟಕದ ಹಿತ ದೃಷ್ಟಿಯಿಂದ ಇಟ್ಟಿಲ್ಲವೆಂದು ನಾನು ಭಾವಿಸಿದ್ದೇನೆ. ಬಡವರನ್ನು ಮೇಲಕ್ಕೆತ್ತುತ್ತೇವೆ ಎಂದು ಹೇಳಿ ಹಲವಾರು ಮುಂದುವರಿದ ಜನಾಂಗಗಳನ್ನು ಹಿಂದಕ್ಕೆ ತಳ್ಳುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಮೂಲ ಭೂತವಾಗಿ ಕಾಣತಕ್ಕ ಈ ಅಂಶವನ್ನು ಮಾನ್ಯ ಅರ್ಥಮಂತ್ರಿಗಳು ಅರ್ಥ ಮಾಡಿಕೊಂಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಈ ಬಜೆಟ್ ಮುಖಾಂತರವಾಗಿ ಆನೆಗಳಿಗೆ ಖೆಡ್ಡಾ ಅಪರೇಷನ್ ಮಾಡು ವಂತೆ ಸ್ವತಂತ್ರವಾದ ಬಡಜನರನ್ನು ತೆಗೆದುಕೊಂಡು ಬಂದು ಖೆಡ್ಡಾ ಅಪರೇಷನ್ ಮಾಡಿದ್ದಾರೆ. ಅಳುವ ಮಕ್ಕಳಿಗೆ ಪೆಪ್ಪರ್‌ಮೆಂಟ್ ಕೊಟ್ಟು ಸುಧಾರಿಸುವಂತೆ ಈ ಬಜೆಟ್ಟಿನಲ್ಲಿ ಬಡಜನರಿಗೆ ಓಲ್ಡ್ ಏಜ್ ಪೆನ್‌ಷನ್, unemployed pension ಕೊಡುತ್ತೇವೆಂದು ಹೇಳಿ ಮತ್ತು ಬಡಜನರ ದುಃಖವನ್ನು ದೂರ ಮಾಡುತ್ತೇವೆಂದು ಅಧಿಕಾರ ದುರುಪಯೋಗಪಡಿಸಿಕೊಂಡು ಈ ಒಂದು ಬಜೆಟ್ಟನ್ನು ನಮ್ಮ ಮುಂದೆ ಇಟ್ಟಿದ್ದಾರೆ. ೧೯೮೦ನೇ ಇಸವಿಯ ಹೊತ್ತಿಗೆ ಕರ್ನಾಟಕದ ಸ್ಥಿತಿ ಏನಾಗುತ್ತದೆ ಎಂಬ ಬಗ್ಗೆ ಚಿಂತನೆ ಮಾಡಬೇಕು. ಆ ದೃಷ್ಟಿಕೋನದಿಂದ ಬಜೆಟ್‌ನ್ನು ತಯಾರಿಸಿದರೆ ನಮಗೆ ಅನುಕೂಲವಾಗುತ್ತದೆ. ಪ್ರಾಯಶಃ ಇದನ್ನೆಲ್ಲಾ ಸರ್ಕಾರದವರು ಸರಿಪಡಿಸುತ್ತಾರೆಂದು ಅಂದುಕೊಂಡು ಕೆಲವು ಮಾತುಗಳನ್ನು ಹೇಳುತ್ತೇನೆ. ನಾವು ಬಜೆಟ್‌ನ್ನು ಸದನದ ಮುಂದೆ ಇಡುವಾಗ ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಅಥವಾ ದೇಶಗಳಲ್ಲಿ ಯಾವರೀತಿ ಮುಂದುವರಿದಿದ್ದಾರೆ, ಯಾವರೀತಿಯ ಬಜೆಟ್‌ನ್ನು ತಯಾರಿಸಿದ್ದಾರೆ, ಯಾವರೀತಿ ಮುಂದುವರೆಯುವುದಕ್ಕೆ ಪ್ರಯತ್ನಪಟ್ಟಿದ್ದಾರೆ ಅದೇರೀತಿ ಕರ್ನಾಟಕದಲ್ಲೂ ಪ್ರಯತ್ನ ಪಟ್ಟಿದ್ದೇವೆಯೋ ಎಂಬ ಅಂಶವನ್ನು ನೋಡಬೇಕು. ನಾನು ತಿಳಿದುಕೊಂಡ ಪ್ರಕಾರ ಅಕ್ಕಪಕ್ಕದ ರಾಜ್ಯ ದಲ್ಲಿ, ಮಹಾರಾಷ್ಟ್ರದಲ್ಲಿ ೧೯೭೪-೭೫ರಲ್ಲಿ ಪರ್‌ಕ್ಯಾಪಿಟ ಇನ್‌ಕಂ ೫೨೫ ರೂಪಾಯಿ ಇದ್ದರೆ ೭೩-೭೪ರಲ್ಲಿ ೧೧೮೦ ರೂಪಾಯಿ ಆಗಿದೆ. ಕೇರಳದಲ್ಲಿ ೧೯೭೪-೭೫ರಲ್ಲಿ ಕೇವಲ ೩೯೩ ರೂಪಾಯಿ ಇದ್ದುದು ೧೯೭೩-೭೪ರಲ್ಲಿ ೭೮೫ ರೂಪಾಯಿ ಆಗಿದೆ. ತಮಿಳುನಾಡಿನಲ್ಲಿ ೧೯೭೪-೭೫ರಲ್ಲಿ ೪೩೦ ರೂಪಾಯಿ ಇದ್ದದ್ದು ೧೯೭೩-೭೪ರಲ್ಲಿ ೮೭೦ ರೂಪಾಯಿ ಆಗಿದೆ. ಆದರೆ ಕರ್ನಾಟಕದಲ್ಲಿ೧೯೭೩-೭೪ರಲ್ಲಿ ೪೨೦ ರೂಪಾಯಿ ಇದ್ದದು ಈಗ ೭೩-೭೪ರಲ್ಲಿ ಕೇವಲ ೭೦೪ ರೂಪಾಯಿ ಆಗಿದೆ. ಇದು ನಿಜವಾಗಿಯೂ ಕೂಡ ಪ್ರಗತಿದಾಯಕ ವಾದ ಬಜೆಟ್ ? ಪ್ರಗತಿಯನ್ನು ತರತಕ್ಕ ಆಯವ್ಯಯಪತ್ರವನ್ನು ತಾವು ತಂದಿದ್ದೀರಾ. ಇದರಿಂದ ಜನ ಗಳಿಗೆ ಒಳ್ಳೆಯದಾಗುತ್ತದೆಯೋ ಎಂಬುದನ್ನು ಮಾನ್ಯ ಮಂತ್ರಿಗಳು ನೋಡಬೇಕಾಗಿದೆ. ಇದರ ಬಗ್ಗೆ

ದೂರದೃಷ್ಟಿ ಹರಿಸಬೇಕು. ಎಲೆಕ್ಟ್ರಿಸಿಟಿ ಬಗ್ಗೆ ಸೆಂಟ್ರಲ್ ಅಥಾರಿಟಿಯವರು ತಮ್ಮ ಸರ್ವೆ ರಿಪೋರ್ಟಿನಲ್ಲಿ ೧೯೮೩–೮೪ರಲ್ಲಿ ೩೦ ಪರ್ಸೆಂಟ್ ಎಲೆಕ್ಟ್ರಿಸಿಟಿ ಡಿಫಿಷಿಯೆನ್ಸಿ ಕರ್ನಾಟಕದಲ್ಲಿ ಬರುತ್ತದೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಇದನ್ನು ಗಮನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ರಾಯಚೂರಿನಲ್ಲಿ ೨೧೦ ಮೆಗೋವಾಟ್ ಇರತಕ್ಕ ಎರಡು ಥರ್ಮಲ್ ಪ್ಲಾಂಟ್ ಯೂನಿಟ್ಟನ್ನು ತರುತ್ತೇವೆಂದು ಹೇಳುತ್ತಾರೆ. ಆದರೆ ಈ ಥರ್ಮಲ್ ಪ್ಲಾಂಟ್ ಯೂನಿಟ್ಟನ್ನು ಮಾಡುವುದರಿಂದ ಆರ್ಥಿಕವಾಗಿ ಒಳ್ಳೆಯದಾಗುವುದಿಲ್ಲ; ಅದು ಒಳ್ಳೆಯ ವಯಬಲ್ ಯೂನಿಟ್ಟಾಗುವುದಿಲ್ಲ ಎಂದು ತಜ್ಞರ ಅಭಿಪ್ರಾಯವಿದೆ. ಆದರೂ ಸಹ ನಮ್ಮ ಮಂತ್ರಿಗಳು ಯಾವ ಕಾರಣದಿಂದ ರಾಯಚೂರಿನಲ್ಲಿ ಅದನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೋ ಗೊತ್ತಿಲ್ಲ. ಆ ರೀತಿ ಮಾಡುವುದರಿಂದ ನಿಜವಾಗಿ ಕರ್ನಾಟಕದ ಜನರಿಗೆ ಒಳ್ಳೆಯದಾಗುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕಾಗಿದೆ, ಹೀಗಾದರೆ ಇನ್ನು ೧೦–೧೨ ವರ್ಷಗಳಲ್ಲಿ ಎಲೆಕ್ಟ್ರಿಸಿಟಿ ಚಾರ್ಜಸ್ಸ್ ಯೂನಿಟ್‌ಗೆ ೧೦ ರೂಪಾಯಿ ಆಗುತ್ತದೆ. ಇದರ ಬಗ್ಗೆ ಸರ್ಕಾರ ದೃಷ್ಟಿ ಹರಿಸಿದೆಯೋ ಎಂದು ಪ್ರಶ್ನೆ ಮಾಡುತ್ತಿದ್ದೇನೆ. ಮಾನ್ಯ ಮಂತ್ರಿಗಳು ಪ್ರಾಯಶಃ ಕರ್ನಾಟಕದ ಜನತೆ ಮುಗ್ಧ ಜನತೆ ಏನು ಮಾಡಿದರೂ ಒಪ್ಪಿಕೊಳ್ಳುತ್ತಾರೆ ಎಂದು ಅಂದುಕೊಂಡಿರಬಹುದು. ಸರ್ಕಾರದವರು ಅರಣ್ಯ ಪ್ರದೇಶಗಳನ್ನು ರಕ್ಷಣೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಗಡಿ ಪ್ರದೇಶದಲ್ಲಿರತಕ್ಕ ೩೩೪೬ ಎಕರೆ ಅರಣ್ಯ ಪ್ರದೇಶದಲ್ಲಿರತಕ್ಕ ಜಮೀನುಗಳನ್ನು ಕರ್ನಾಟಕ ಸರ್ಕಾರದವರು ಕೇರಳದ ಟಿಂಬರ್ ಮರ್ಚೆಂಟ್ಸ್‌ಗೆ ೯೯ ವರ್ಷ ಲೀಸ್‌ಗೆ ಕೊಟ್ಟಿದ್ದಾರೆ. ಇದನ್ನು ಯಾರನ್ನು ಕೇಳಿಕೊಟ್ಟಿದ್ದಾರೆ ? ನಮ್ಮ ಕರ್ನಾಟಕದವರು ೧೨ ಸಾವಿರ ಎಕರೆಗಳನ್ನು ಲೀಸ್‌ಗೆ ತೆಗೆದುಕೊಂಡಿದ್ದರೂ ಇವರನ್ನು ಬಿಡಿಸಿ ಕರ್ನಾಟಕದ ಜಮೀನನ್ನು ಕೇರಳಕ್ಕೆ ಮಾರಾಟ ಮಾಡಿದುದರ ಪರಿಣಾಮ ಏನಾಗಿದೆ ಎಂದರೆ ಪಶ್ಚಿಮ ಕರಾವಳಿಯಲ್ಲಿರತಕ್ಕ ಮರಗಳನ್ನು ಅವರು ಕಡಿದು ಹಾಕಿದ್ದಾರೆ. ಮಳೆ ಸರಿಯಾಗಿ ಬರಬೇಕಾದರೆ ಮರಗಳ ಅವಶ್ಯಕತೆ ಇದೆ. ಇವರು ಕೇರಳದವರಿಗೆ ಲೀಸ್‌ಗೆ ಕೊಟ್ಟಿದ್ದು ಅವರು ಮರಗಳನ್ನು ಹೆಚ್ಚಾಗಿ ಕಡಿದು ಹಾಕುತ್ತಿರುವುದರಿಂದ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಮಳೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇದರಿಂದ ವ್ಯವಸಾಯಕ್ಕೂ ತೊಂದರೆಯಾಗುತ್ತದೆ, ಅಲ್ಲದೆ ವಿದ್ಯುಚ್ಛಕ್ತಿ ಉತ್ಪಾದನೆಯ ಮೇಲೆ ಪರಿಣಾಮ ಉಂಟಾಗುತ್ತದೆ. ಈ ರೀತಿ ತೊಂದರೆಯಾಗಬೇಕೆಂದು ಸರ್ಕಾರದ ಉದ್ದೇಶವೇ ? ಇದೇ ರೀತಿ ಮಾಡಿದರೆ ನೀವು ಇನ್ನು ೫ ವರ್ಷ ಖಂಡಿತ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ವೇಳೆ ನೀವು ಅಧಿಕಾರದಲ್ಲಿ ಇದ್ದದ್ದೇ ಆದರೆ ವಿಧಾನಸೌಧವನ್ನೂ ಮಾರುವಂಥ ಪರಿಸ್ಥಿತಿ ಬಂದೀತು. ಆದರೆ ಆ ರೀತಿ ಆಗದೇ ಇರಲಿ ಎಂದು ಕೇಳಿಕೊಳ್ಳುತ್ತೇನೆ. ಬಜೆಟ್ ಭಾಷಣದಲ್ಲಿ ಜಮೀನು ಮಾರಿರುವುದರ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಜಮೀನನ್ನು ಬೇರೆಯವರಿಗೆ ಮಾರಿರುವುದರಿಂದ ಏನಾಗಿದೆಯೆಂದರೆ ೧೨ ಸಾವಿರ ಎಕರೆ ಜಮೀನಿನಲ್ಲಿ ಇಲಾಖೆಗೆ ಬರುತ್ತಿದ್ದ ಫಾರಿನ ಎಕ್ಸ್‌ಚೇಂಜ್ ಹೋಗುತ್ತದೆ. ಗೇಣಿದಾರರಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ತಾವು ಹೇಳುತ್ತೀರಿ; ಅದರ ಬಗ್ಗೆಯೂ ಇಲ್ಲಿ ಪ್ರಸ್ತಾಪವಿಲ್ಲ. ಸರ್ಕಾರ ತೆಗೆದುಕೊಂಡಿರುವ ಈ ಕ್ರಮದಿಂದ ನಮ್ಮ ಗೇಣಿದಾರರಿಗೆ ಅನ್ಯಾಯವಾಗಿದೆ. ಇವರ ಬಗ್ಗೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ಎಂದು ಪ್ರಶ್ನೆ ಹಾಕುತ್ತಿದ್ದೇನೆ. ಇದನು ಪರಿಶೀಲನೆ ಮಾಡಬೇಕು. ಬಡವರನ್ನು ಉದ್ಧಾರ ಮಾಡಬೇಕು ಎಂದು ನಮ್ಮ ಸರ್ಕಾರ ಹೇಳುತ್ತಿದೆ. ಯಾವುದೇ ಮನುಷ್ಯ ಉದ್ಧಾರವಾಗಬೇಕಾದರೆ ಸತ್ಯ ಶುದ್ಧವಾದ ಕಾಯಕದಿಂದ ಕೆಲಸ ಮಾಡಿದಾಗ ಮಾತ್ರ ಅವನಿಗೆ ಪ್ರತಿಫಲ ಸಿಗುತ್ತದೆ, ತಾನು ತಿಂದ ಅನ್ನ ಜೀರ್ಣವಾಗುತ್ತದೆ. ಬಸವಣ್ಣನವರು ಸತ್ಯಶುದ್ಧವಾದ ಕಾಯಕದಿಂದ ಮಾಡಿದಂಥ ಆರ್ಜನೆ ಒಳ್ಳೆಯದು, ಕಾಯಕವೇ ಕೈಲಾಸ ಎಂದು ಹೇಳಿದ್ದಾರೆ. ತಾವು ಬಜೆಟ್ಟಿನಲ್ಲಿ ನಿರುದ್ಯೋಗಿಗಳಿಗೆ ಸ್ಟೈಫಂಡ್ ಕೊಡುವ ಬಗ್ಗೆ ಹೇಳಿದ್ದೀರಿ. ಓಲ್ಡ್ ಏಜ್ ಪೆನ್‌ಷನ್ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಇದರಿಂದ ಸೋಮಾರಿತನ ಆಲಸ್ಯ ಹೆಚ್ಚಾಗುತ್ತದೆ. ಇದರಿಂದ ಆರ್ಥಿಕವಾಗಿ ಯಾರೂ ಉದ್ಧಾರವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇವರ ಬಗ್ಗೆ ತಾವು ಯೋಚನೆ ಮಾಡಬೇಕು.

ನೀವು ಏನಾದರೂ ಒಂದು ಬಡ್ಜೆಟ್ ತಯಾರು ಮಾಡಬೇಕಾದರೆ ಅದು ಆದಾಯ ತೋರಿಸಬೇಕೇ ವಿನಾ ಕೊರತೆಯ ಬಡ್ಜೆಟ್ ಆಗಬಾರದು ಇಂಥಾ ಒಂದು ಆದಾಯ ತೋರಿಸತಕ್ಕಂಥಾ ಬಡ್ಜೆಟ್ಟನ್ನು ನೀವು ಯಾವಾಗಲೂ ಮಾಡಲಿಕ್ಕೆ ಸಾಧ್ಯವಿಲ್ಲ ಅನ್ನುವ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಯಾವಾಗ ನೋಡಿದರೂ ಈ ಬಡ್ಜೆಟ್ಟಿನಲ್ಲಿರುವ ಒಂದು ದೊಡ್ಡ ಕೊರತೆ ಏನು ಎಂದರೆ ಅದು ರೀಜನಲ್ ಇಂಬ್ಯಾಲೆನ್ಸ್ ಆಗಿರುತ್ತದೆ. ತಮಗೆ ಈ

ಸಂದರ್ಭದಲ್ಲಿ ಒಂದು ಉದಾಹರಣೆ ಹೇಳ ಬೇಕಾದರೆ ಒಂದು ಮನೆಯಲ್ಲಿ ಒಂದು ಸಂಸಾರದಲ್ಲಿ ೪ ಜನ ಮಕ್ಕಳು ಇದ್ದರೆ ಅವರಲ್ಲಿ ಒಂದು ಮಗು ಬಹಳ ಬಡವು ಆಗಿದ್ದರೆ ಆ ಮಗುವನ್ನು ತಾಯಿಯಾದವಳು ಏನು ಮಾಡುತ್ತಾಳೆ ಎಂದರೆ ಇತರ ಮಕ್ಕಳಂತೆ ಸರಿಸಮನಾಗಿ ಮುಂದಕ್ಕೆ ಬರುವಂತೆ ಆ ಮಗುವಿಗೆ ಹೆಚ್ಚು ಹಾಲು ಕುಡಿಸಿ ಬೆಳೆಸುತ್ತಾಳೆ. ಇದು ತಾಯಿ ಮಾಡಬೇಕಾದಂಥಾ ಕರ್ತವ್ಯ. ಆದರೆ ನಮ್ಮ ಕರ್ನಾಟಕ ಸರ್ಕಾರದಲ್ಲಿ ನಮ್ಮ ಆರ್ಥಿಕ ಮಂತ್ರಿಗಳ ಬಡ್ಜೆಟ್ಟಿನಲ್ಲಿ ಏನಾಗಿದೆ ಎಂದರೆ ಹಿಂದುಳಿದ ಪ್ರದೇಶಗಳಾದಂಥಾ ಬೀದರ್ ಗುಲ್ಬರ್ಗ ಮತ್ತು ರಾಯಚೂರು ಏನು ಇವೆ ಇದನ್ನು ಮೇಲಕ್ಕೆತ್ತಲು ಇವರು ಪ್ರಯತ್ನ ಪಟ್ಟಿಲ್ಲ ಎಂದು ಹೇಳಬೇಕಾಗಿದೆ. ಅವರ ಬಡ್ಜೆಟ್ ಮುಖಾಂತರ ಈ ಜಿಲ್ಲೆಗಳು ಬಹಳ ಹಿಂದುಳಿರುವುದರಿಂದ ಇದನ್ನು ಮುಂದಕ್ಕೆ ತರುವುದಕ್ಕೆ ತಾವು ಏನು ವ್ಯವಸ್ಥೆ ಮಾಡಿದ್ದೀರಿ ಅಂತ ಈ ಬಡ್ಜೆಟ್ಟಿನಲ್ಲಿ ನೋಡುವುದಾದರೆ ಯಾವರೀತಿಯಾದಂಥಾ ವ್ಯವಸ್ಥೆಯನ್ನೂ ಕೂಡ ಮಾಡಿಲ್ಲ. ಆದುದರಿಂದ ಈ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ ಅನ್ನುವುದನ್ನು ತಾವು ತಿಳಿಸಬೇಕು.

ಇನ್ನು ಅಗ್ರಿಕಲ್‌ಚರ್‌ಲ್ಲಿ ಲೇಬರರ್ಸ್ ಬಗ್ಗೆ ಹೇಳುವುದಾದರೆ ಒಟ್ಟು ೩೦ ಪರ್ಸೆಂಟ್ ಇದ್ದಾರೆ. ಇದರ ಬಗ್ಗೆ ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಹೋಗದೇ ಇದ್ದರೂ ಕೂಡ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಡುತ್ತೇನೆ. ನೀವು ಈ ಬಗ್ಗೆ ಡಿಸ್ಟ್ರಿಕ್ಟ್‌ವೈಸ್ ಲೆಕ್ಕ ತೆಗೆದುಕೊಂಡರೆ ಒಂದೊಂದು ಜಿಲ್ಲೆಗೂ ಏನೇನು ವ್ಯತ್ಯಾಸ ಇದೆ ಅನ್ನುವುದು ಗೊತ್ತಾಗುತ್ತದೆ. ರಾಯಚೂರು ಜಿಲ್ಲೆ ತೆಗೆದುಕೊಂಡರೆ ಅಲ್ಲಿಯವರ ವರಮಾನ ಒಂದು ವರ್ಷದ ಪರ್ ಕ್ಯಾಪಿಟಾ ಇನ್‌ಕಂ ೫೮೫ ಇದೆ, ಅದೇ ಕೂರ್ಗ್ ಜಿಲ್ಲೆ ತೆಗೆದುಕೊಂಡರೆ ಒಂದು ವರ್ಷದ ಪರ್ ಕ್ಯಾಪಿಟಾ ಇನ್‌ಕಂ ೧೪೦೦ ಇದೆ. ಹೀಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹೋಲಿಸಿದರೆ ಒಂದು ಜಿಲ್ಲೆಯ ಪರ್ ಕ್ಯಾಪಿಟಾ ಇನ್‌ಕಂ ಹೆಚ್ಚು ಇದೆ, ಇನ್ನೊಂದು ಜಿಲ್ಲೆಯ ಪರ್ ಕ್ಯಾಪಿಟಾ ಇನ್‌ಕಂ ಕಡಿಮೆ ಇದೆ. ಎಲ್ಲಿ ಆದಾಯ ಕಡಿಮೆ ಇದೆಯೋ ಅದನ್ನು ಇತರೇ ಜಿಲ್ಲೆಗಳಂತೆ ಹೆಚ್ಚು ಮಾಡುವಂತೆ ಒಂದು ಸರಿಸಮನಾಗಿ ಮಾಡುವಂತೆ ಈ ಬಡ್ಜೆಟ್ಟಿನಲ್ಲಿ ಒಂದು ವ್ಯವಸ್ಥೆ ಮಾಡಿಲ್ಲಾ. ಇದರ ಪರಿಣಾಮ ಏನಾಗುತ್ತದೆ ಎಂದರೆ ಇನ್ನು ೫ ವರ್ಷ ಕಳೆದ ನಂತರ ಈ ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳು ಮತ್ತಷ್ಟು ಕೂಡ ಇನ್ನೂ ಹಿಂದುಳಿಯುವಂಥಾ ಸಂದರ್ಭ ಬರುತ್ತದೆ. ಈ ಬಗ್ಗೆ ಮುಂದೆ ಏನು ವ್ಯವಸ್ಥೆ ಮಾಡುತ್ತೀರಿ ಅನ್ನುವುದನ್ನು ಈ ಸಂದರ್ಭದಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ

ಇನ್ನು ಬ್ಯಾಂಕುಗಳ ವಿಚಾರದಲ್ಲಿ ಹೇಳುವುದಾದರೆ ಒಂದು ಜಿಲ್ಲೆಯಲ್ಲಿ ಹೆಚ್ಚು ಹೆಚ್ಚು ಬ್ಯಾಂಕುಗಳು ಇವೆ, ಮತ್ತೊಂದು ಜಿಲ್ಲೆಯಲ್ಲಿ ಒಂದೊಂದೇ ಬ್ಯಾಂಕು ಇದೆ. ನಿಮಗೆ ಒಂದು ಉದಾಹರಣೆ ಹೇಳುವುದಾದರೆ ಗುಲ್ಬಾರ್ಗ ಜಿಲ್ಲೆ ೪೨ ಸಾವಿರ ಜನಸಂಖ್ಯೆ ಇರತಕ್ಕಂಥಾ ಈ ಒಂದು ಜಿಲ್ಲೆಗೆ ಒಂದೇ ಒಂದು ಬ್ಯಾಂಕು ಇದೆ, ಅದೇ ದಕ್ಷಿಣ ಕನ್ನಡ ಜಿಲ್ಲೆ ತೆಗೆದುಕೊಂಡರೆ ಪ್ರತಿ ೭ ಸಾವಿರ ಜನಕ್ಕೆ ಒಂದು ಬ್ಯಾಂಕ್ ಇದೆ. ಯಾವ ಜಿಲ್ಲೆಗಳು ಮುಂದುವರೆದಿವೆ ಅಲ್ಲಿ ಹೆಚ್ಚು ಬ್ಯಾಂಕುಗಳು ಇವೆ, ಯಾವ ಪ್ರದೇಶಗಳು ಹಿಂದುಳಿದಿವೆ ಅಲ್ಲಿ ಕಡಿಮೆ ಬ್ಯಾಂಕುಗಳು ಇವೆ. ಎಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಕಡಿಮೆ ಬ್ಯಾಂಕ್ ಇವೆ ಆ ಜಿಲ್ಲೆಯನ್ನು ಮುಂದಕ್ಕೆ ತರುವುದಕ್ಕೆ ಹೆಚ್ಚು ಬ್ಯಾಂಕುಗಳು ಆದ್ದರೆ ಒಳ್ಳೆಯದಲ್ಲವೇ? ಅಂಥಾ ಪ್ರದೇಶವನ್ನು ಮೇಲಕ್ಕೆ ತರುವುದಕ್ಕೆ ಈ ಬಡ್ಜೆಟ್‌ನಲ್ಲಿ ಏನಾದರೂ ಒಂದು ವ್ಯವಸ್ಥೆ ಮಾಡಿದ್ದೀರಾ ಅನ್ನುವುದನ್ನು ತಿಳಿಸಬೇಕು.

ಇನ್ನು ಬೆಳಗಾಂ ವಿಷಯದ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಆ ಪಕ್ಷ ಈ ಪಕ್ಷ ಅನ್ನುವ ವಿಷಯವಲ್ಲ. ಈವೊತ್ತಿನ ದಿವಸ ಅಲ್ಲಿ ಇರುವ ೫ ಸ್ಥಾನಗಳೂ ಕೂಡ ಎಂ.ಇ.ಎಸ್.ಗೆ ಹೋಗಿವೆ. ಏತಕ್ಕಾಗಿ ಆ ಸ್ಥಾನಗಳು ಅವರಿಗೆ ಹೋಗಿವೆ ಎನ್ನುವುದನ್ನು ತಾವು ಯೋಚನೆ ಮಾಡಿದ್ದೀರಾ? ಇದಕ್ಕೆ ಈಗಿನ ಸರ್ಕಾರವೇ ಕಾರಣ ಎಂದು ನಾನು ಆರೋಪಣೆ ಮಾಡಿದರೆ ತಪ್ಪಾಗಲಾರದು. ತಮಗೆ ಈ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಅದೇನೆಂದರೆ ಬೆಳಗಾಂ ಜಿಲ್ಲೆಯ ಬಾರ್ಡರ್ ಪ್ರದೇಶವಾದಂಥಾ, ೩–೪ ಹಳ್ಳಿಗಳಲ್ಲಿ ಈವೊತ್ತಿನವರೆಗೂ ಕೂಡ ಒಂದು ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಒಂದು ಎಲೆಕ್ಟ್ರಿಸಿಟಿ ಇಲ್ಲ. ಇದನ್ನು ಏನಾದರೂ ತಾವು ಗಮನಿಸಿದ್ದೀರಾ? ೩೦ ವರ್ಷದಿಂದಲೂ ಕೂಡ ಸರ್ಕಾರ ಆಡಳಿತವನ್ನು ನಡೆಸಿಕೊಂಡು ಬಂದಿದ್ದರೂ ಕೂಡ ಆ ಪ್ರದೇಶಕ್ಕೆ ಯಾವ ತರಹವಾದ ಒಂದು ನೀರಿನ ವ್ಯವಸ್ಥೆ ಮತ್ತು ಎಲೆಕ್ಟ್ರಿಸಿಟಿ ವ್ಯವಸ್ಥೆ ಮಾಡಿಲ್ಲಾ. ೧೯೫೬ನೇ ಇಸವಿಯಲ್ಲಿ ಕರ್ನಾಟಕ ಏಕೀಕರಣವಾಯಿತು. ಅವಾಗಿನಿಂದಲೂ ಈವರೆಗೂ ಅವರಿಗೆ ಯಾವ ಒಂದು ವ್ಯವಸ್ಥೆಯನ್ನೂ ಸಹ ಮಾಡಿಕೊಟ್ಟಿಲ್ಲಾ ಆದುದರಿಂದ ಅವರೆಲ್ಲಾ ಎಂ.ಇ.ಎಸ್.ನವರಿಗೆ ಓಟು

ಹಾಕಿದರು. ಇದಕ್ಕೆ ನೀವು ಕಾರಣರಲ್ಲದೆ ಮತ್ತಾರು ಹೇಳಿ. ಅವರಿಗೆ ಬೇಕಾದಂಥಾ ವ್ಯವಸ್ಥೆ ಮಾಡಿದ್ದರೆ ಆ ಸ್ಥಾನಗಳು ಎಂ.ಇ.ಎಸ್.ಗೆ ಹೋಗುತ್ತಾ ಇರಲಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಆರೋಪಣೆ ಮಾಡುತ್ತೇನೆ. ಇದಕ್ಕೆ ತಾವು ಉತ್ತರದಲ್ಲಿ ಏನು ಹೇಳುತ್ತೀರಾ ಅನ್ನುವುದನ್ನು ನಾನು ಕೇಳುತ್ತೇನೆ. ಮತ್ತು ಈ ಬಡ್ಜೆಟ್ಟಿನಲ್ಲಿ ಮುಂದೆ ಅವರಿಗೆ ಏನೇನು ವ್ಯವಸ್ಥೆ ಮಾಡುತ್ತೀರಾ ಅನ್ನುವುದನ್ನು ಹೇಳಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅಲ್ಲದೆ ಆ ಬಾರ್ಡರ್ ಪ್ರದೇಶಗಳಲ್ಲಿರುವಂಥ ಜನರಿಗೆ ಬೇಕಾದಂಥಾ ವ್ಯವಸ್ಥೆಯನ್ನು ಅಂದರೆ ಒಂದು ಕುಡಿಯುವ ನೀರಿನ ವ್ಯವಸ್ಥೆ ಮತ್ತು ಎಲೆಕ್ಟ್ರಿಸಿಟಿ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕಾಗಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಕನ್ನಡ ಭಾಷೆ ಬಗ್ಗೆ ಹೇಳುವುದಾದರೆ ನಮ್ಮ ಕರ್ನಾಟಕದಲ್ಲಿ ಕನ್ನಡದ ಏಳಿಗೆಗಾಗಿ ಕನ್ನಡ ಭಾಷಾಭಿವೃದ್ಧಿಯನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದೀರೇ ವಿನಾ ಅದರ ಬಗ್ಗೆ ಇದು ವರೆಗೆ ಯಾವ ಒಂದು ವ್ಯವಸ್ಥೆಯೂ ಕೂಡ ಇಲ್ಲ. ಉದಾಹರಣೆಗೆ ಈ ಬಗ್ಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ, ಏನು ಮಾಡಬೇಕು ಅನ್ನುವ ಒಂದು ಯೋಜನೆ ಹಾಕಿದ್ದಾರೆ ಅಂತ ನಾನು ಈ ಬಡ್ಜೆಟ್‌ನ್ನು ಎಲ್ಲ ಪುಟವನ್ನು ತಿರುವಿ ಹಾಕಿ ನೋಡಿದರೆ ಇದರ ಬಗ್ಗೆ ಒಂದು 'ಚಕಾರ' ಶಬ್ದವನ್ನೂ ಎತ್ತಿಲ್ಲ. ನಿಮಗೇನಾದರೂ ನಮ್ಮ ದೇಶದಲ್ಲಿ ಕನ್ನಡ ಆಡಳಿತ ಭಾಷೆ ಮಾಡುವುದಕ್ಕೆ ಏನಾದರೂ ಧೈರ್ಯ ಇದೆಯೋ ಎಂದು ಕೇಳುತ್ತೇನೆ. ಏತಕ್ಕೆಂದರೆ ಈ ಬಡ್ಜೆಟ್ಟಿನಲ್ಲಿ ಈ ಬಗ್ಗೆ ನೀವು ಯಾವ ಒಂದು ವ್ಯವಸ್ಥೆಯನ್ನೂ ಮಾಡಿಲ್ಲವಾದ್ದರಿಂದ ನಾನು ಕಳಕಳಿಯಿಂದ ಕೇಳುತ್ತಿದ್ದೇನೆ.

ಇನ್ನು ನಮ್ಮ ಕರ್ನಾಟಕ ದೇಶದಲ್ಲಿರುವ ಹೆಣ್ಣುಮಕ್ಕಳನ್ನು ಯಾವರೀತಿ ಮಾಡಿದ್ದಾರೆ ಎಂಬುದರ ಬಗ್ಗೆ ಒಂದೆರಡು ವಿಷಯಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಹಿಂದೆ ನಮ್ಮ ದೇಶದಲ್ಲಿ ಒಬ್ಬ ಮನು ಇದ್ದ. ಆತನು ಹೇಳಿದ್ದು ಏನೆಂದರೆ ಹೆಣ್ಣುಮಕ್ಕಳು ಚಿಕ್ಕವರಾಗಿದ್ದರೆ ತಂದೆ ಆ ಹೆಣ್ಣುಮಗುವನ್ನು ರಕ್ಷಣೆ ಮಾಡುತ್ತಾನೆ, ನಂತರ ಆ ಹೆಣ್ಣು ಮಗು ಯೌವನಕ್ಕೆ ಬಂದಾಗ ಗಂಡ ರಕ್ಷಣೆ ಮಾಡುತ್ತಾನೆ ನಂತರ ಆ ಹೆಣ್ಣು ಮಗುವು ಮುದಿತನಕ್ಕೆ ಬಂದಾಗ ಮಕ್ಕಳು ರಕ್ಷಣೆ ಮಾಡುತ್ತಾರೆ. ಹೀಗಾಗಿ ಕೊನೆಯುವರೆಗೂ ಕೂಡ ಹೆಣ್ಣು ಮಕ್ಕಳಿಗೆ ಒಂದು ಸ್ವಾತಂತ್ರ್ಯ ಇಲ್ಲ, ಒಂದು ರಕ್ಷಣೆ ಇಲ್ಲ. ಇದೇ ರೀತಿ ನಮ್ಮ ಕರ್ನಾಟಕ ದೇಶದಲ್ಲಿ ಶ್ರೀಮಾನ್ ದೇವರಾಜ್ ಅರಸ್‌ರವರು ನಮ್ಮ ಕರ್ನಾಟಕ ದೇಶದಲ್ಲಿರುವ ಹೆಣ್ಣುಮಕ್ಕಳನ್ನು ಯಾವ ಒಂದು ಸ್ಥಿತಿಗೆ ತಂದಿದ್ದಾರೆ ಅನ್ನುವುದರ ಬಗ್ಗೆ ಒಂದೆರಡು ಮಾತುಗಳನ್ನು ಪ್ರಸ್ತಾಪ ಮಾಡುತ್ತೇನೆ. ಕರ್ನಾಟಕ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜ್ ಅರಸ್‌ರವರು ಹೆಣ್ಣು ಮಗುವಾದ ಶ್ರೀಮತಿ ಇಂದಿರಾಗಾಂಧಿಯವರನ್ನು ನಮ್ಮ ನಾಯಕಿ ಎಂದುಒಪ್ಪಿಕೊಂಡಿದ್ದಾರೆ. ಆದರೆ ಇವರು ಭೂಸುಧಾರಣೆಯ ಒಂದು ನೆಪದಲ್ಲಿ ನಮ್ಮ ಹೆಣ್ಣು ಮಕ್ಕಳನ್ನು ಯಾವ ಒಂದು ರಕ್ಷಣೆಯೂ ಇಲ್ಲದಂತೆ ಮಾಡಿದ್ದಾರೆ. ಅವರು ನಮ್ಮ ಕರ್ನಾಟಕ ದೇಶದಲ್ಲಿ ಒಂದು ಸ್ವತಂತ್ರ ಜೀವಿಯಾಗಿ ಉಳಿಯಬೇಕೇ ಬೇಡವೇ ಅನ್ನುವುದನ್ನು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತೇನೆ. ಇದಕ್ಕೆ ಒಂದು ಗಾದೆ ಇದೆ ಅದೇನೆಂದರೆ ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎಂಬಂತೆ ನಮ್ಮ ಕರ್ನಾಟಕ ದೇಶದ ಹೆಣ್ಣು ಮಕ್ಕಳ ಒಂದು ಸ್ಥಿತಿ ಆ ರೀತಿ ಆಗಿದೆ. ತಮಗೆ ಈ ಬಗ್ಗೆ ಹೇಳಬೇಕಾದರೆ ಭೂ ಎಂದರೆ ತಾಯಿ, ತಾಯಿಯಾದಂಥಾ ನಮ್ಮ ಭೂವಿಗೆ ಭೂಸುಧಾರಣೆಯ ಒಂದು ನೆಪದಲ್ಲಿ ಹೆಣ್ಣುಮಕ್ಕಳಿಗೆ ಒಂದು ಹಕ್ಕು ಇಲ್ಲದಂತೆ ಒಂದು ಕಾನೂನು ತಂದಿದ್ದಾರೆ. ಹಿಂದುಳಿದವರನ್ನು ಮುಂದಕ್ಕೆ ತರುವ ಒಂದು ನೆಪದಲ್ಲಿ, ಬ್ಯಾಕ್‌ವರ್ಡ್ ಕ್ಲಾಸ್‌ನವರನ್ನು ಮುಂದಕ್ಕೆ ತರಬೇಕು ಅನ್ನುವ ಒಂದು ನೆಪದಲ್ಲಿ, ಮತ್ತು ಹಾವನೂರ್ ರಿಪೋರ್ಟ್‌ನ ಒಂದು ವರದಿಯ ನೆಪದಲ್ಲಿ ಮುಂದುವರೆದವರನ್ನು ಇನ್ನೂ ಉತ್ತಮರನ್ನಾಗಿ ಮಾಡುವುದಕ್ಕೆ ಈ ಒಂದು ಭೂಸುಧಾರಣೆಯ ಕಾನೂನನ್ನು ತಂದಿದ್ದಾರೆ. ಈವೊತ್ತಿನ ದಿವಸ ನಮ್ಮ ಕರ್ನಾಟಕ ದೇಶದ ಹೆಣ್ಣುಮಕ್ಕಳ ಒಂದು ಸ್ಥಿತಿ ಗತಿ ನೋಡಿದರೆ ಬಹಳ ಶೋಚನೀಯವಾಗುತ್ತದೆ, ಅವರಿಗೆ ಈವೊತ್ತಿನ ದಿವಸ ಭೂಸುಧಾರಣೆಯ ಒಂದು ಕಾನೂನಿನಿಂದ ಯಾವ ಒಂದು ಹಕ್ಕೂ ಸಹ ಇಲ್ಲದಂತೆ ಮಾಡಿದ್ದಾರೆ. ಈ ಬಗ್ಗೆ ಏನಾದರೂ ಕೇಳಿದರೆ ಏನು ಹೇಳುತ್ತಾರೆ ಎಂದರೆ ಹೆಣ್ಣುಮಕ್ಕಳು ಮದುವೆ ಆಗಿ ಗಂಡನ ಮನೆಗೆ ಹೋಗುವುದರಿಂದ ಅವರಿಗೆ ಏತಕ್ಕೆ ಕೊಡಬೇಕು ಎಂದು ಕೇಳುತ್ತಾರೆ. ಹಾಗಾದರೆ ಇವರು ಫ್ಯಾಮಿಲಿ ಅನ್ನುವ ಒಂದು ಡೆಫಿನೆಷನ್ ಏನು ಹಾಕಿಕೊಂಡಿದ್ದಾರೆ.ೀ ಅದರಲ್ಲಿ ಅವರಿಗೆ ಇರಬೇಕಾದ ಒಂದು ಸ್ವಾತಂತ್ರ್ಯದ ಹಕ್ಕೂ ಗೊತ್ತಿಲ್ಲ ಎಂದರೆ ನಾವು ಏನು ಹೇಳುವುದಕ್ಕಾಗುತ್ತದೆ ಹೇಳಿ, ತಂದೆಯಾದವನಿಗೆ ತನ್ನ ಮಕ್ಕಳನ್ನು

ಸರಿಯಾಗಿ ಬೆಳೆಸುವುದಕ್ಕಾಗುವುದಿಲ್ಲ ಎಂದರೆ ಇದಕ್ಕೆ ನಾವೇನು ಹೇಳಬೇಕಾಗುತ್ತದೆ ಹೇಳಿ. ನಮ್ಮ ಕರ್ನಾಟಕ ದೇಶದಲ್ಲಿ ೫೨ ಪರ್ಸೆಂಟ್ ಹೆಣ್ಣುಮಕ್ಕಳು ಇದ್ದಾರೆ. ೧½ ಕೋಟಿಗಿಂತಲೂ ಹೆಚ್ಚು ನಮ್ಮ ಹೆಣ್ಣುಮಕ್ಕಳು ಈ ಕರ್ನಾಟಕದಲ್ಲಿ ಇದ್ದಾರೆ ಅನ್ನುವುದನ್ನು ತಾವು ತಿಳಿಯಬೇಕು. ಈ ಭೂಸುಧಾರಣೆ ಕಾನೂನಿನಿಂದ ನಮ್ಮ ಕರ್ನಾಟಕದಲ್ಲಿ ೭ ಲಕ್ಷ ಜನರಿಗೆ ಉಪಯೋಗವಾಗುತ್ತದೆ ಎಂದು ಹೇಳಿದ್ದಾರೆ. ಉಳುವವನೇ ಭೂಮಿಯ ಒಡೆಯ ಅಂತ ಇವರಿಗೆಲ್ಲಾ ಭೂಮಿ ಕೊಡುತ್ತೇವೆ ಅಂತ ಹೇಳಿದ್ದಾರೆ. ಆದರೆ ಇದೆ ಸಂದರ್ಭದಲ್ಲಿ ಹೇಳುವುದಾದರೆ ನಮ್ಮ ಕರ್ನಾಟಕ ದೇಶದಲ್ಲಿ ಇರತಕ್ಕಂಥಾ ೫೨ ಪರ್ಸೆಂಟ್ ಹೆಣ್ಣು ಮಕ್ಕಳ ಒಂದು ಹಕ್ಕುಬಾಧ್ಯತೆಗೆ ಚ್ಯುತಿ ತಂದಿದ್ದಾರೆ ಅನ್ನುವುದನ್ನು ತಾವು ಮರೆಯಬಾರದು. ಇದು ಯಾವ ನ್ಯಾಯ ಎಂದು ಕೇಳುತ್ತೇನೆ. ೫೨ ಪರ್ಸೆಂಟ್ ಹೆಣ್ಣುಮಕ್ಕಳ ಪೈಕಿ ೩೦ ಪರ್ಸೆಂಟ್ ಅಗ್ರಿಕಲ್‌ಚರಲ್ ಲೇಬರ್ಸ್ ಇದ್ದಾರೆ. ಇನ್ನು ೨೨ ಪರ್ಸೆಂಟ್ ಅಷ್ಟು ಸ್ಮಾಲ್ ಹೋಲ್ಡರ್ಸ್‌ನವರು ಇದ್ದಾರೆ. ೭ ಲಕ್ಷ ಎಕರೆ ಭೂಮಿಯಲ್ಲಿ ೫ ಲಕ್ಷ ಜನರು ಗೇಣಿದಾರರಾಗಿದ್ದಾರೆ ಎಂದು ಹೇಳುತ್ತಾರೆ. ನಮ್ಮ ಕರ್ನಾಟಕ ದೇಶದಲ್ಲಿರುವ ೫೨ ಪರ್ಸೆಂಟ್ ಹೆಣ್ಣುಮಕ್ಕಳ ಒಂದು ಹಕ್ಕಿಗೆ ಚ್ಯುತಿ ತಂದು ಬೇರೆ ಯವರಿಗೆ ಅಂದರೆ ೭ ಲಕ್ಷ ಜನಗೇಣಿದಾರರಿಗೆ ಉಪಕಾರ ಮಾಡುವುದು ಯಾವ ನ್ಯಾಯ ಎಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳಬೇಕಾಗಿದೆ. ಆ ಹೆಣ್ಣುಮಕ್ಕಳ ಹಕ್ಕುಬಾಧ್ಯತೆಗಳನ್ನು ಕಿತ್ತುಕೊಂಡು ಹಿಂದುಳಿದವರನ್ನು ಮುಂದಕ್ಕೆ ತರುತ್ತೇವೆ ಅಂತ ಹೇಳುವುದು ಯಾವ ನ್ಯಾಯ? ಇದಕ್ಕೆ ತಾವು ಉತ್ತರ ಕೊಡಬೇಕು. ಹಿಂದೆ ಒಬ್ಬ ಮನು ಹೇಳಿದಂತೆ ಈ ಭೂಸುಧಾರಣೆಯ ಒಂದು ನೆಪದಿಂದ ನಮ್ಮ ಹೆಣ್ಣು ಮಕ್ಕಳ ಹಕ್ಕುಬಾಧ್ಯತೆಗೆ ಚ್ಯುತಿ ತಂದಿರುವುದು ನ್ಯಾಯವೇ? ಇದು ಭೂಸುಧಾರಣೆಯ ಒಂದು ಬಡ್ಜೆಟ್ಟೇ? ಅವರಿಗೆ ತೊಂದರೆ ಕೊಟ್ಟು ಈ ರೀತಿಯಾದಂಥಾ ಒಂದು ನಾಟಕ ಆಡುವುದು ಸರಿಯೇ? ಅವರಿಗೆ ಯಾವ ರೀತಿಯಾಗಿ ನಿಮ್ಮ ಬಡ್ಜೆಟ್ಟಿನಿಂದ ಉಪಯೋಗವಾಗುತ್ತದೆ ಅನ್ನುವುದನ್ನು ಮತ್ತು ಅವರಿಗೆ ಏನು ವ್ಯವಸ್ಥೆ ಮಾಡಿದ್ದೀರಿ ಅನ್ನುವುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಹಿಂದುಳಿದ ಜನಾಂಗಕ್ಕೆ ಏನು ಅನ್ಯಾಯವಾಗಿದೆ ಹೇಳಿ. ಅವರನ್ನು ನಮ್ಮ ಮುಖ್ಯಮಂತ್ರಿಗಳು ಉದ್ಧಾರ ಮಾಡಿಲ್ಲವೇ. ನಮ್ಮ ಶ್ರೀಮಾನ್ ದೇವರಾಜ್ ಅರಸ್‌ರವರನ್ನು ನಾವು ದೇವರು ಎಂದು ಕರೆಯಬೇಕು. ಹೆಣ್ಣುಮಕ್ಕಳಿಗೆ ಅನ್ಯಾಯವಾಗಿದೆ ಅಂತ ಹೇಳುತ್ತಿದ್ದೀರಲ್ಲಾ ಅವರಿಗೆ ಏನು ಅನ್ಯಾಯವಾಗಿದೆ ಹೇಳಿ?

ಕುಮಾರಿ ಎಸ್. ಪ್ರಮೀಳ.— ನಾನು ಯೀಲ್ಡ್ ಆಗುವುದಿಲ್ಲ. ಈ ರೀತಿಯಾಗಿ ನಮ್ಮ ಕರ್ನಾಟಕದಲ್ಲಿ ಅವರು ಮಾಡಬಾರದ ಕೆಲಸವನ್ನು ಮಾಡಿದ್ದಾರೆ. ತಮಗೆ ಹೇಳಬೇಕಾದರೆ ಅವರು ನಮ್ಮ ಕರ್ನಾಟಕ ದೇಶದಲ್ಲಿ ಏನೇನು ಮಾಡಿದ್ದಾರೆ ಎಂದರೆ ಕುಡುಕರನ್ನು ಹೆಚ್ಚಿಸಿದ್ದಾರೆ, ವಿದ್ಯಾಭ್ಯಾಸವನ್ನು ಕಡಿಮೆ ಮಾಡಿದ್ದಾರೆ. ಆದುದರಿಂದ ಮಾನ್ಯ ಅಧ್ಯಕ್ಷಿಣಿಯವರೇ ನಾನು ಈ ಬಡ್ಜೆಟ್ಟಿನ ಮೇಲೆ ಏನೇನು ಇಲ್ಲಿಗ್ಯಾಲಿಟೀಸ್ ಇದೆ ಅಂತ ಹೇಳಿದೆನೋ ಅದರ ಬಗ್ಗೆ ಮಾನ್ಯ ಆರ್ಥಿಕ ಮಂತ್ರಿಗಳು ಏನು ವ್ಯವಸ್ಥೆ ಮಾಡುತ್ತಾರೆ ಅನ್ನುವುದನ್ನು ತಿಳಿಯುವುದಕ್ಕೋಸ್ಕರ ಈ ಕೆಲವು ಅಂಶಗಳನ್ನು ಅವರ ಗಮನಕ್ಕೆ ತರುತ್ತಿದ್ದೇನೆ.

ಇನ್ನು ಈ ಬಡ್ಜೆಟ್ಟಿನಲ್ಲಿ ನೋಡಿದರೆ ಪ್ರೊಡಕ್ಟೀವ್ ಇಂಪ್ಲಿಕೇಷನ್ಸ್‌ಗೆ ಒಂದು ಸರಿಯಾದ ಪ್ರೋಗ್ರಾಂ ಇಲ್ಲ. ಈ ಆಯವ್ಯಯದಲ್ಲಿ ಯಾವುದೇ ಒಂದು ರೀತಿಯಾದಂಥಾ ವ್ಯವಸ್ಥಿತವಾದ ಉತ್ಪಾದನಾಕಾರಿ ಉದ್ಯೋಗಕ್ಕಾಗಿ ಯೋಜನೆ ಹಾಕಿಲ್ಲಾ. ನಾನು ಈ ಬಡ್ಜೆಟ್ ಪುಸ್ತಕದಲ್ಲಿ ಮೊದಲಿನಿಂದ ಕೊನೇ ಪುಟ ದವರೆಗೂ ಕೂಡ ತಿರುವಿ ಹಾಕಿದ್ದರಲ್ಲಿ ಯಾವುದೇ ಪುಟದಲ್ಲೂ ಕೂಡ ನಮ್ಮ ದೇಶದಲ್ಲಿ ಉತ್ಪಾದನೆ ಬಗ್ಗೆ ಒಂದು ಯೋಜನೆ ಇಲ್ಲ ಎಂದು ನಾನು ಈ ಸಂದರ್ಭದಲ್ಲಿ ಇಲ್ಲಿ ಹೇಳಬಯಸುತ್ತೇನೆ. ಆದುದರಿಂದ ಈ ಬಡ್ಜೆಟ್ ಯಾವ ಒಂದು ಉತ್ಪಾದನೆಗೂ ಸಹ ಸರಿಹೋಗುವುದಿಲ್ಲ. ಈ ತರಹ ಬಡ್ಜೆಟ್ ಹೀಗೆ ಮುಂದುವರೆಯುವುದಾದರೆ ಇನ್ನು ಒಂದು ವರ್ಷದಲ್ಲಿ ಟ್ರೆಷರಿಯಲ್ಲಿರುವ ಹಣವೆಲ್ಲಾ ಖಾಲಿಯಾಗಿ ನೌಕರರಿಗೆ ಸಂಬಳ ಕೊಡುವುದಕ್ಕೇನೇ ಹಣ ಇಲ್ಲದಹಾಗಾಗುತ್ತದೆ ಎಂದು ನನಗೆ ಕಾಣುತ್ತದೆ. ಆದುದ ರಿಂದ ತಾವು ಇದಕ್ಕೆ ಏನು ವ್ಯವಸ್ಥೆ ಮಾಡುತ್ತೀರಾ ಅನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸಬೇಕು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

12-00 NOON

ಮತ್ತೊಂದು ವಿಷಯವೇನೆಂದರೆ, ಇಲ್ಲಿ ಯಾವುದೇ ವಿಧವಾದ ಮಿನಿಮಂ ಬೇಸಿಕ್ ನೀಡ್‌ಗಳನ್ನು ಒದಗಿಸತಕ್ಕ ವ್ಯವಸ್ಥೆಯೂ ಕೂಡ ಇಲ್ಲ. ಇದು ಸೋಷಿಯಲ್ ವೆಲ್‌ಫೇರ್ ಸ್ಟೇಟ್‌ನಲ್ಲಿರತಕ್ಕ ಪದ್ಧತಿಯೇ ಎಂದು ನಾನು ಕೇಳಬೇಕಾಗಿದೆ. ಅದು ಹೋಗಲಿ ಎಂದರೆ, ಇಕ್ವಿಟಬಲ್ ಪ್ರೈಸ್ ರೈಸ್, ಇನ್‌ಕಂ ಬ್ಯಾಲೆನ್ಸ್ ಎನ್ನುವಂಥ ತತ್ವವನ್ನು ತಾವು ಒಪ್ಪಿಕೊಂಡಿದ್ದೀರಿ. ಇದಕ್ಕೆ ಅನುಗುಣವಾಗಿ ಇಲ್ಲಿಯೂ ಕೂಡ ಬಡ್ಜೆಟ್ಟಿನಲ್ಲಿ ಪ್ರಾವಿಷನ್‌ನಿಲ್ಲ. ಬೆಲೆಗಳು ಹೆಚ್ಚು ಹೆಚ್ಚಾಗಿ ಹೆಚ್ಚಿಕೊಂಡು ಹೋಗುತ್ತಿರುವಾಗ ಕೊಡುವ ಸಂಬಳ ಕಡಿಮೆಯಾಗುತ್ತಾ ಹೋಗುತ್ತದೆ. ಇವೆರೆಡನ್ನೂ ಕೂಡ ಸಮತೋಲನ ಮಾಡಿಕೊಂಡು ಹೋಗಬೇಕಾಗಿದೆ. ಇದನ್ನು ಮಾಡಿ ಕಾರ್ಮಿಕರಿಗೆ ಸಾರ್ವಜನಿಕರಿಗೆ ಯೋಗ್ಯವಾದ ಬಡ್ಜೆಟ್ಟನ್ನು ಒದಗಿಸಬೇಕಾಗಿದೆ. ಆದರೆ ಇಂಥ ಯಾವುದೇ ಪ್ರಕಾರವಾದ ಪ್ರಾವಿಷನ್‌ಗಳು ಈ ಬಡ್ಜೆಟ್ಟಿನಲ್ಲಿಲ್ಲ. ರಿಡಕ್ಷನ್ಸ್ ಆಫ್ ರೀಜನಲ್ ಇನ್‌ಇಕ್ವಾಲಿಟೀಸ್, ಇದಕ್ಕೂ ಕೂಡ ಪ್ರಾವಿಷನ್ ಇಲ್ಲ. ಆದ್ದರಿಂದ ಇವೆಲ್ಲವನ್ನೂ ಕೂಡ ತಾವು ತಿಳಿದುಕೊಂಡು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು ಎಂದು ನಾನು ಹೇಳುತ್ತೇನೆ. ಅಲ್ಲದೆ ಹೆಣ್ಣುಮಕ್ಕಳನ್ನು ತಾವು ಏನು ಅಧೋಗತಿಗೆ ತಂದಿದ್ದೀರಿ ಅದನ್ನು ಚೆನ್ನಾಗಿ ಅರ್ಥಮಾಡಿಕೊಂಡು ಅವರನ್ನು ಮೇಲೆ ಎತ್ತುವ ಪ್ರಯತ್ನವನ್ನು ಮಾಡುತ್ತೀರಿ ಎಂದು ನಾನು ನಂಬಿಕೊಂಡಿದ್ದೇನೆ. ಇಷ್ಟುಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಣೀಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ.ಟಿ. ರಾಮು (ಚನ್ನಪಟ್ಟಣ):—ಸನ್ಮಾನ್ಯ ಅಧ್ಯಕ್ಷಣೀ ಮಾತೆಯವರೇ, ೧೯೭೮–೭೯ನೇ ಇಸವಿಯ ಮುಂಗಡಪತ್ರವನ್ನು ಮಾನ್ಯ ಅರ್ಥಸಚಿವರು ಏನು ತಂದಿದ್ದಾರೆ ಅದನ್ನು ನಾನು ಸಂಪೂರ್ಣ ವಾಗಿ ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ. ಏಕೆಂದರೆ, ಈ ಮುಂಗಡಪತ್ರ ಸಮಾಜವಾದಿ ಲೇಪನ ವನ್ನು ಹೊಂದಿದೆ. ಈ ಬಡ್ಜೆಟ್ ಸಮಾಜವಾದಿ ಸತ್ವದ ತರಹದಲ್ಲಿದೆ. ಈ ಬಡ್ಜೆಟ್ಟಿನಲ್ಲಿ ರಾಜ್ಯವನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯುವಂಥ ಅಂಶಗಳು ಇವೆ. ಆದಕಾರಣ ಈ ಬಡ್ಜೆಟ್ಟನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಾ ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಪ್ರಪ್ರಥಮವಾಗಿ, ಯಾವುದೇ ಸಮಾಜವಾದಿ ರಾಷ್ಟ್ರದಲ್ಲಿ ಒಬ್ಬ ವ್ಯಕ್ತಿ ಗೌರವದಿಂದ ಬಾಳಬೇಕಾದರೆ ಅವನಿಗೆ ಮೂರು ಅಂಶಗಳು ಮುಖ್ಯವಾಗಿ ಬೇಕು. ಅವು ಯಾವುವೆಂದರೆ, ಒಂದನೆಯದು, ಇರಲಿಕ್ಕೆ ಒಂದು ಗೃಹ, ಹೊದಿಯಲಿಕ್ಕೆ ಬಟ್ಟೆ, ಉಣಲಿಕ್ಕೆ ರೊಟ್ಟಿ. ಈ ಮೂರು ಅಂಶಗಳು ಯಾರೇ ಆಗಿರಲೀ, ಎಂಥ ದೊಡ್ಡ ವ್ಯಕ್ತಿಯಾಗಿರಲಿ ಬೇಕೇ ಬೇಕು. ಈ ದೃಷ್ಟಿಯಿಂದ ಬಡ್ಜೆಟ್ಟನ್ನು ನಾವು ವೀಕ್ಷಣೆ ಮಾಡಿ ನೋಡಿ ದಾಗ, ಈ ಅಂಶಗಳ ಕಡೆಗೆ ನಮ್ಮ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಪ್ರಪ್ರಥಮವಾಗಿ, ಉಳುವವನೇ ಭೂಮಿಯ ಒಡೆಯನಾಗಬೇಕು ಎನ್ನುವ ತತ್ವವನ್ನು ನಾವುಆಧಾರ ವಾಗಿಟ್ಟುಕೊಂಡು ಪ್ರಗತಿದಾಯಕವಾದ ಭೂ ಸುಧಾರಣೆಯ ಕಾನೂನನ್ನು ತಂದಿದ್ದೇವೆ. ಯಾವುದೋ ಒಂದುನಗರದಲ್ಲಿದ್ದು ಕೊಂಡು ೧೫೦ ಮೈಲಿ ದೂರದಲ್ಲಿರತಕ್ಕ ಹಳ್ಳಿಯಲ್ಲಿ ವ್ಯವಸಾಯ ಮಾಡಿಸುವುದು ಸಾಧ್ಯವೇ?ಇಂಥ ಶ್ರೀಮಂತರಿಗೆ, ಭೂ ಒಡೆಯರಿಗೆ, ಜಮೀನುದಾರರಿಗೆ ಭೂ ಶಾಸನದಿಂದ ಹೊಡೆತ ಬಿದ್ದಿದೆ ಎನ್ನುವುದನ್ನು ನಾವು ಗಮನಿಸಬೇಕು. ನಿಜವಾಗಿಯೂ ಯಾವನು ಭೂಮಿಯನ್ನು ಉಳುತ್ತಾನೋ ಅವನೇ ಭೂಮಿಗೆ ಒಡೆಯ ನಾಗಬೇಕು: ಎನ್ನತಕ್ಕ ಕಾನೂನನ್ನು ನಾವು ಮಾಡಿದ್ದೇವೆ. ನಮ್ಮ ರಾಜ್ಯ ದಲ್ಲಿ, ಭೂ ನ್ಯಾಯಾಲಯಗಳ ಬಗ್ಗೆ ಅನೇಕ ದೊಡ್ಡದೊಡ್ಡ ವ್ಯಕ್ತಿಗಳು ಅನೇಕ ವಿಧವಾದ ಮಾತುಗಳನ್ನು ಆಡಿದ್ದಾರೆ. ಅವಿದ್ಯಾವಂತರುಗಳನ್ನು ಭೂ ಪಂಚಾಯತಿಗಳಲ್ಲಿ ಹಾಕಿದ್ದಾರೆ, ಕಾನೂನಿನ ಗಂಧವಿಲ್ಲದವರಿಗೆ ಇದರ ಸದಸ್ಯತ್ವವನ್ನು ಕೊಟ್ಟಿದ್ದಾರೆ ಎಂದು ವಿರೋಧಿ ಮಿತ್ರರೂ ಸಹ ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಈ ರಾಷ್ಟ್ರದ ಸಂಸ್ಕೃತಿ, ಈ ರಾಷ್ಟ್ರದ ನಾಗರೀಕತೆಯ ಭವ್ಯ ಪರಂಪರೆಯನ್ನು ನಾವು ನೋಡಿದಾಗ ಪಂಚಾಯತಿಗೆ ಇರತಕ್ಕಂಥ ಮಹತ್ವದ ಮತ್ತು ದೊಡ್ಡ ಬೆಲೆಯನ್ನು ನಾವು ಅರಿತುಕೊಳ್ಳ ಬೇಕು ಎಂದು. ನಮ್ಮ ಪೂರ್ವಜರು ಅರಳಿ ಕಟ್ಟೆಯ ಕೆಳಗಡೆ ಕುಳಿತು ನ್ಯಾಯವನ್ನು ವಿತರಣೆ ಮಾಡು ತ್ತಿದ್ದರು. ಅವರು ಕೊಡುತ್ತಿದ್ದಂಥ ತೀರ್ಪು ಇವತ್ತು ನಮ್ಮ ಶ್ರೇಷ್ಠ ನ್ಯಾಯಾಲಯಗಳಲ್ಲಿಯೂ ಕೊಡುತ್ತಿರಲಿಲ್ಲ; ಎಂದರೆ ಅದು ಅತಿಶಯೋಕ್ತಿಯಾಗಲಾರದು. ಆದರೆ ನಮ್ಮ ಪೂರ್ವಜರು ಯಾವ ಕಾನೂನಿನ ಕಾಲೇಜುಗಳಲ್ಲಿಯೂ ಓದಲಿಲ್ಲ, ಅವರು ವಿದ್ಯಾವಂತರಲ್ಲ ಅವರು ಯಾವ ಎಂ ಬಿಲ್‌ಗಳನ್ನೂ ಮಾಡಲಿಲ್ಲ, ಮತ್ತು ಯಾವ ಕಾನೂನಿಗಳನ್ನು ಅಭ್ಯಾಸ ಮಾಡಿದವರಲ್ಲ. ಅವರು ಸತ್ಯ, ಧರ್ಮ,

ನಿಷ್ಠೆಯ ಆಧಾರದ ಮೇಲೆ ತೀರ್ಪನ್ನು ಕೊಡುತ್ತಿದ್ದರು. ಇದೇ ಒಂದು ಆಧಾರದ ಮೇಲೆ ನಮ್ಮ ಭೂ ಪಂಚಾಯತಿಗಳಲ್ಲಿ ನ್ಯಾಯವನ್ನು ವಿವರಣೆ ಮಾಡುತ್ತಿದ್ದಾರೆ. ಇದೇ ಆಧಾರದ ಮೇಲೆ ಸುಮಾರು ೩ ಲಕ್ಷ ೨೧,೯೯೬ ಅರ್ಜಿಗಳ ಮೊಕದ್ದಮೆಗಳಿಗೆತೀರ್ಪನ್ನು ಕೊಟ್ಟಿದ್ದಾರೆ. ಇನ್ನೂ ಸುಮಾರು ೪ ಲಕ್ಷ ಚಿಲ್ಲರೆ ಅರ್ಜಿಗಳ ಮೊಕದ್ದಮೆಗಳು ಇವೆ. ಇದರಲ್ಲಿ ಸುಮಾರು ೨,೧೮,೦೦೦ ಮೊಕದ್ದಮೆಗಳು ಗೇಣಿದಾರರೇ ಉಳುವವರಾಗಿರುವುದರಿಂದ ಅವರ ಪರವಾಗಿವೆ, ನಾವು ವೀಕ್ಷಣೆ ಮಾಡಿದಾಗ ಅವಿದ್ಯಾವಂತರು ಜನರು ಒಳ್ಳೆಯ ತೀರ್ಪನ್ನು ಕೊಡಬಲ್ಲರು ಎನ್ನುವುದನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ. ನಮ್ಮ ಭೂ ನ್ಯಾಯಾಲಯಗಳು ಏನು ಇವೆ, ಅವುಗಳು ಒಳ್ಳೆಯ ಕೆಲಸಗಳನ್ನು ಮಾಡುತ್ತಿವೆ. ಇಂಥ ಒಂದು ಪ್ರಗತಿ ಪರವಾದ ಕಾನೂನನ್ನು ತಂದಿರತಕ್ಕುದು ಒಳ್ಳೆಯದು, ಇದರ ಒಂದು ಚೌಕಟ್ಟಿನ ಈಗಿರುವ ಮೊಕದ್ದಮೆಗಳಿಗೂ ಅತಿ ಜಾಗ್ರತೆಯಾಗಿ ತೀರ್ಪನ್ನು ನ್ಯಾಯಾಲಯಗಳವರು ಕೊಡಬೇಕು ಎಂದು ನಾನು ಅವರನ್ನು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.'

ಎರಡನೆಯ ವಿಚಾರ ಎಂದರೆ.—ವೃದ್ಧಾಪ್ಯ ವೇತನ. ನಮ್ಮ ರಾಜ್ಯದಲ್ಲಿ ನಮ್ಮ ಸರ್ಕಾರ ಸುಮಾರು ೧,೮೦,೦೦೦ ಸಾವಿರ ಜನಕ್ಕೆ ವೃದ್ಧಾಪ್ಯ ವೇತನವನ್ನು ಕೊಡುತ್ತಿದೆ. ೧೯೭೮–೭೯ನೇ ಇಸವಿಯ ಬಜೆಟ್ಟಿನಲ್ಲಿ ಸುಮಾರು ೯ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಮೀಸಲಾಗಿಟ್ಟಿದ್ದಾರೆ. ನಮ್ಮ ವಿರೋಧಿ ಮಿತ್ರರು ಹೇಳಿದರು, ವೃದ್ಧಾಪ್ಯ ವೇತನವನ್ನು ಕೊಡುವುದರಿಂದ ನಮ್ಮ ಸರ್ಕಾರ ಒಂದು ಹೊಸ ವರ್ಗವನ್ನು ಸೃಷ್ಟಿ ಮಾಡಿದಂತಾಗಿದೆ, ಒಂದು ವರ್ಗದ ಭಿಕ್ಷುಕರನ್ನು ತಯಾರು ಮಾಡುತ್ತಿದ್ದಾರೆಂದು. ೬೫–೭೦ ವರ್ಷ ವಯಸ್ಸಾಗಿರತಕ್ಕ ಜನರು ಭಿಕ್ಷೆ ಮಾಡುವುದಕ್ಕೆ ಹೋಗುವುದಕ್ಕೆ ಸಾಧ್ಯವೇ? ಅವರಿಗೆ ಮಿನಿಮಮ್ ವೇತನ ನಿಗದಿ ಮಾಡಿರುವುದು ಸುಮಾರು ೬೫ ರೂಪಾಯಿಗಳು ಮಾತ್ರ, ಇದು ಒಂದು ಆಶ್ಚರ್ಯವಾಗಿದೆ. ಮಗನು ಇಲ್ಲ, ಮಗಳು ಇಲ್ಲ, ಅಕ್ಕ ಪಕ್ಕದಲ್ಲಿ ಯಾರೋ ಬ್ಬರೋ ನೋಡಿಕೊಳ್ಳುತ್ತಿರುವವರಿಗೆ ಭಿಕ್ಷೆ ಬೇಡಿ ತಿನ್ನಬೇಕು ಎಂದು ಹೇಳುವುದು ಸರಿಯೇ? ನಾವು ಅವರಿಗೆ ಕನಿಷ್ಟ ಜೀವನ ನಡೆಸಿ ಎಂದು ೪೦ ರೂಪಾಯಿಗಳ ಮಾಸಾಶನ ಕೊಟ್ಟಿದೆ, ಅದಕ್ಕೆ ನಾವು ಒಂದು ಭಿಕ್ಷುಕ ವರ್ಗವನ್ನು ಸೃಷ್ಟಿ ಮಾಡುತ್ತಿದ್ದೇವೆಂದು ಒಂದು ವಾದ ಮಾಡುವುದನ್ನು ನೋಡಿದರೆ ಇದು ಮಾನವೀಯತೆಯ ಚಿಹ್ನೆಯೇ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ವೃದ್ಧಾಪ್ಯ ವೇತನ ಕೊಡುವುದು ಸ್ವಾಗತಾರ್ಹವಾದುದು. ಯಾವುದೇ ಸಮಾಜವಾದಿ ರಾಷ್ಟ್ರದಲ್ಲಿ ಸಮಾಜವಾದಕ್ಕೆ ಒಂದು ಬುನಾದಿಯನ್ನು ಹಾಕ ಬೇಕಾದರೆ, ಮುಖ್ಯವಾಗಿ ವಾಸ ಮಾಡುವುದಕ್ಕೆ ಜನರಿಗೆ ಗೃಹಗಳನ್ನು, ನಿವೇಶನಗಳನ್ನು ಸರ್ಕಾರ ಒದಗಿಸ ಬೇಕಾಗಿದೆ. ಇದಕ್ಕಾಗಿ ನಮ್ಮ ಸರ್ಕಾರದವರು ಈ ವರ್ಷ ಸುಮಾರು ೧೦ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ನಾವು ಈಗ ನಮ್ಮ ವಸತಿ ಮಂತ್ರಿಗಳು ಹೇಳುವುದನ್ನು ಲೆಕ್ಕ ಹಾಕಿದರೆ ಹುಡ್ಕೋ ಸ್ಕೀಂನ ಮುಖಾಂತರ ಇನ್ನೂ ೧೫ ಕೋಟಿ ರೂಪಾಯಿಗಳನ್ನು ಒದಗಿಸಿ ಬಡವರು ಬದುಕುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟಿದ್ದಾರೆ. ಇಂಥ ಒಂದು ಕಾರ್ಯಕ್ರಮ ಹಾಕಿಕೊಂಡಿರುವುದನ್ನು ನಾವು ನೋಡಿದರೆ, ನಿಜವಾಗಿಯೂ ನಾವು ಹೆಮ್ಮೆ ಪಡಬೇಕಾಗಿದೆ ಎಂದು ನಾನು ಹೇಳುತ್ತೇನೆ. ಜನತಾ ಗೃಹಗಳನ್ನು ಸರ್ಕಾರದವರು ಕಟ್ಟಿದ್ದಾರೆ, ಅವುಗಳ ಟಾಪ್ ಹಾರಾಡುತ್ತಿವೆ. ಎಂದುಮಾನ್ಯ ವಿರೋಧಿ ಮಿತ್ರರುಗಳು ಹೇಳಿದ್ದಾರೆ. ಇಂಥವರಿಗೆ ನಾನು ಒಂದು ಸವಾಲನ್ನು ಹಾಕುವುದಕ್ಕೆ ಇಷ್ಟ ಪಡುತ್ತೇನೆ. ನನ್ನ ಕ್ಷೇತ್ರಕ್ಕೆ ಈ ಮಾನ್ಯ ಮಿತ್ರರುಗಳನ್ನು ಕರೆದು ಕೊಂಡು ಹೋಗಿ, ಜನತಾ ಗೃಹಗಳನ್ನು ಅವರಿಗೆ ತೋರಿಸುತ್ತೇನೆ'. ಅಲ್ಲಿ ಟಾಪ್‌ಗಳು ಹಾರಾಡುತ್ತಿವೆಯೋ ಏನೋ ಅವರು ನೋಡಲಿ. ಕೆಲವು ಕಂಟ್ರಾಕ್ಟರುಗಳು ಸರಿಯಾಗಿಲ್ಲದವರು ಸೇರಿಕೊಂಡು ಕೆಲವು ಕಡೆ ಈ ರೀತಿಯಾಗಿರಬಹುದು. ನೂರಕ್ಕೆ ೫ ಪರ್ಸೆಂಟ್ ಮನೆಗಳು ಸರಿಯಾಗಿಲ್ಲದೇ ಇರಬಹುದು ಆದರೆ ಇಡೀ ಯೋಜನೆಯೇ ತಪ್ಪು ಎಂದು ಹೇಳುವುದು, ಅದು ಸಮರ್ಥನೀಯವಾದುದಲ್ಲ ಎಂದು ನಾನಾದರೂ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ನಾನು ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡುವಾಗ, ಕೆಲವರಿಗೆ ಪ್ರತಿ ಮನೆಗೆ ೨೫೦ರೂ. ವೆಚ್ಚದಲ್ಲಿ ನಿರ್ಮಿಸತಕ್ಕಂಥ ಗುಡಿಸಲುಗಳಿಗಾಗಿ ಗಳಗಳನ್ನು ಕೊಟ್ಟಿದ್ದನ್ನು ನಾನು ನೋಡಿದೆ. ಆ ಗಳಗಳೆಲ್ಲಾ ಕುಟ್ಟು ಹಿಡಿದಿದ್ದವು. ಕಾರಣ ಕೇಳಿದಾಗ ಕಂಟ್ರಾಕ್ಟರ್ ಅಂತಹ ಗಳಗಳನ್ನು ಸರಬರಾಜು ಮಾಡಿದ್ದು ಎಂದು ಅವರು ಹೇಳಿದರು. ಈ ರೀತಿ ಕಂಟ್ರಾಕ್ಟರ್ ಮಾಡಿದ ತಪ್ಪಿಗೆ ಇಡೀ ಯೋಜನೆಯನ್ನೇ ಸರಿಯಿಲ್ಲ ಎಂದು ಹೇಳುವುದು ಅಷ್ಟು ಸಮರ್ಥನೀಯವಲ್ಲ. ಇಂತಹ ಕಂಟ್ರಾಕ್ಟರುಗಳ ಹೆಸರುಗಳನ್ನು

ಬ್ಲಾಕ್ ಲಿಸ್ಟಿಗೆ ಸೇರಿಸುವುದರ ಮೂಲಕ ಅಂತಹವರ ಲೈಸನ್ಸನ್ನು ರದ್ದು ಮಾಡಿ ಅವರುಗಳು ಇಂತಹ ಯೋಜನೆಯಲ್ಲಿ ಭಾಗವಹಿಸುವಂತಹ ಒಂದು ಅವಕಾಶವನ್ನು ತಪ್ಪಿಸಬೇಕೆಂದು ತಮ್ಮ ಮೂಲಕ ಹೌಸಿಂಗ್ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಕುಡಿಯುವ ನೀರಿನ ಯೋಜನೆಯು ಬಗ್ಗೆ ಹೇಳಬೇಕೆಂದರೆ, ಕೆಲವು ಪ್ರದೇಶಗಳು ಕ್ಷಾಮ ಡಾಮರಗಳಿಗೆ ತುತ್ತಾದಾಗ ಅಂತಹ ಪ್ರದೇಶಗಳಲ್ಲಿ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಆಗ ಅಲ್ಲಿನ ಹೆಣ್ಣುಮಕ್ಕಳು ಒಂದೆರಡು ಮೈಲಿಗಳವರೆಗೆ ನಡೆದು ಕೊಂಡು ಹೋಗಿ ನೀರು ತರಬೇಕಾಗುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ಸರ್ಕಾರದವರು ಕೊಳವೆ ಬಾವಿಗಳನ್ನು ತೆಗೆಸಿ ನೀರನ್ನು ಒದಗಿಸುತ್ತಿದ್ದಾರೆ. ಇಂತಹ ನೀರನ್ನು ಈ ಜನರಿಗೆ ಕುಡಿಸುವುದು ತಪ್ಪೆಂದು ಮಾನ್ಯ ಬಸಪ್ಪನವರು ಹೇಳಿದರು. ಕೆಲವು ಕಡೆ ಕೊಳವೆ ಬಾವಿಗಳಲ್ಲಿ ಕೆಟ್ಟ ನೀರು ಬಂದಿರಬಹುದು. ಆದರೆ ಎಲ್ಲ ಬಾವಿಗಳಲ್ಲಿಯೂ ಕೆಟ್ಟ ನೀರು ಬರುವುದಿಲ್ಲ. ಒಟ್ಟಿನಲ್ಲಿ ನಮ್ಮ ಸರ್ಕಾರದವರು ಮನುಷ್ಯನಿಗೆ ಅಗತ್ಯವಾದ ನೀರನ್ನು ಒದಗಿಸುವ ಸಲುವಾಗಿ ಈ ಯೋಜನೆಗೆ ಸಾಕಷ್ಟು ಹಣವನ್ನು ಈ ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಇದಕ್ಕಾಗಿ ೬.೪೫ ಕೋಟಿ ರೂ. ಗಳನ್ನು ಒದಗಿಸಲಾಗಿದೆ.

ಇನ್ನು ಪ್ರೈಮರಿ ಶಾಲಾ ಉಪಾಧ್ಯಾಯರ ಬಗ್ಗೆ ಹೇಳಬೇಕೆಂದರೆ, ನಾನೂ ಸಹ ಪ್ರೈಮರಿ ಶಾಲಾ ಉಪಾಧ್ಯಾಯರ ಮಗನಾಗಿದ್ದೇನೆ. ಈ ಉಪಾಧ್ಯಾಯರುಗಳ ಕತೆಯನ್ನು ಲೆಕ್ಕ ಹಾಕಿದರೆ, ಇವರು ನಿವೃತ್ತಿ ಹೊಂದುವವರೆಗೂ ಸಹ ಪ್ರೈಮರಿ ಶಾಲಾ ಉಪಾಧ್ಯಾಯರಾಗಿಯೇ ಇರಬೇಕಾಗುತ್ತದೆ. ಮಧ್ಯದಲ್ಲಿ ಇವರಿಗೆ ಪೇಪರ್ ವ್ಯಾಲ್ಯುಯೇಷನ್ ಕೆಲಸವೂ ಸಹ ಸಿಗುವುದಿಲ್ಲ. ಜೊತೆಗೆ ಇವರ ನಿವೃತ್ತಿ ವಯಸ್ಸನ್ನು ಸರ್ಕಾರ ೫೮ರಿಂದ ೫೫ಕ್ಕೆ ಮೊಟಕು ಮಾಡಿದೆ. ಇದನ್ನು ನಾನು ಬೆಂಬಲಿಸುತ್ತೇನೆ. ಆದರೆ ಬೇರೆ ಉಪಾಧ್ಯಾಯರುಗಳಿಗಿಂತ ಈ ಪ್ರೈಮರಿ ಶಾಲಾ ಉಪಾಧ್ಯಾಯರುಗಳ ಯೋಗ ಕ್ಷೇಮವನ್ನು ನೋಡುವುದು ಒಳ್ಳೆಯದೆಂದು ಸರ್ಕಾರದಲ್ಲಿ ಪ್ರಾರ್ಥಿಸುತ್ತೇನೆ. ಇವರ ನಿವೃತ್ತಿ ವಯಸ್ಸನ್ನು ಒಂದೂ ವರೆ ವರ್ಷವಾದರೂ ಹೆಚ್ಚು ಮಾಡಬೇಕೆಂದು ಹೇಳುತ್ತೇನೆ.

ಇನ್ನು ರಾಜಕೀಯ ಸಂತ್ರಸ್ತರಿಗೆ ವೇತನ ಕೊಡಬೇಕಾದರೆ ಅವರು ಕನಿಷ್ಟ ಪಕ್ಷ ೬ ತಿಂಗಳುಗಳ ಕಾಲ ಸೆರೆಮನೆ ವಾಸವನ್ನು ಅನುಭವಿಸಿರಬೇಕೆಂದು ನಿಯಮ ಮಾಡಲಾಗಿದೆ. ನಮಗೆ ಸ್ವಾತಂತ್ರ್ಯ ಬಂದು ೩೦ ವರ್ಷಗಳ ಮೇಲಾಯಿತು. ಅಂದರೆ ಈ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆಲ್ಲಾ ಇಂದು ೬೦ ವರ್ಷಗಳ ಮೇಲೆ ವಯಸ್ಸಾಗಿದೆ. ಅಂದರೆ ಇವರುಗಳು ರಿಟೈರ್ ಏಜಿನಲ್ಲಿದ್ದಾರೆ, ಆದ್ದರಿಂದ ಇವರಿಗೆ ವೇತನ ಅಥವಾ ಪರಿಹಾರ ಕೊಡುವ ಕಾಲಕ್ಕೆ ಒಂದು ತಿಂಗಳು ಇಲ್ಲವೇ ಒಂದೂವರೆ ತಿಂಗಳು ಜೈಲಿಗೆ ಹೋದವರಿಗೂ ಸಹ ಕೊಡಬೇಕು. ೬ ತಿಂಗಳು ಜೈಲಿಗೆ ಹೋದವರಿಗೆ ಇರತಕ್ಕಂಥ ದೇಶ ಭಕ್ತಿ ೬ ವಾರಗಳ ಕಾಲ ಜೈಲಿಗೆ ಹೋದವರಿಗೆ ಇರುವುದಿಲ್ಲವೇ ಎಂದು ನಾನು ತಮ್ಮನ್ನು ಕೇಳುತ್ತೇನೆ. ಆದ ಕಾರಣ ಇಂಥವರಿಗೂ ಸಹ ವೇತನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕಲಾವಿದರಿಗೂ ಮಾಸಾಶನವನ್ನು ಕೊಡಬೇಕೆಂದು ಹೇಳುತ್ತೇನೆ.

ಚೇರ್‌ಮನ್‌ರವರು.—ಈಗ ಸಮಯವಿಲ್ಲ, ಇದನ್ನೆಲ್ಲಾ ತಾವು ಡಿಮ್ಯಾಂಡ್ಸ್ ಬಂದಾಗ ಹೇಳಬಹುದು.

ಶ್ರೀ ಡಿ.ಟಿ. ರಾಮು.—ಆಗಬಹುದು. ಡಿಮ್ಯಾಂಡ್ಸ್ ಬಂದಾಗ ಎಲ್ಲ ವಿಚಾರಗಳನ್ನು ಹೇಳುತ್ತೇನೆ. ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ಈ ಮುಂಗಡ ಪತ್ರವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಮತ್ತು ಬೆಂಬಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್ (ಭಾರತೀನಗರ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಒಂದು ಬಡ್ಜೆಟ್ ಬರಬೇಕಾದರೆ, ಕಳೆದ ಚುನಾವಣೆಯಲ್ಲಿ ತುರ್ತುಪರಿಸ್ಥಿತಿಯ ಕಾಲದಲ್ಲಿ ಆದ ವಿಚಾರಗಳು, ಅದೇ ರೀತಿ ನಮ್ಮ ಸಂವಿಧಾನಕ್ಕೆ ತಿದ್ದುಪಡಿ ತಂದಾಗ ಅದರ ಪ್ರಿಯಾಂಬಲ್‌ನಲ್ಲಿ ನಮ್ಮದು socialistic and secular sovereign republic ಎಂದು ತಿದ್ದುಪಡಿಯಾಗಿತ್ತು, ಇದೆಲ್ಲಾ ಆದನಂತರ ಚುನಾವಣೆ ನಡೆದಿದ್ದು. ಚುನಾವಣೆಯಲ್ಲಿ ಜನರು ಆಡಳಿತ ಪಕ್ಷದ ರೀತಿನೀತಿಗಳಿಗೆ, ಧೋರಣೆಗಳಿಗೆ ಮನ್ನಣೆ ಕೊಟ್ಟಿದ್ದಾರೆಂದು ಹೇಳಿಕೊಂಡು ಈ ಒಂದು ಮಹಾಸಂಖ್ಯೆಯಲ್ಲಿ ಚುನಾಯಿಸಿ ಬಂದನಂತರ ತಯಾರಾದ ಈ ಬಡ್ಜೆಟ್ಟಿನಲ್ಲಿ ಸೋಷಿಯಲಿಜಂ ಅಥವಾ ಸೆಕ್ಯುಲರಿಜಂ ಬಗ್ಗೆ ಏನೂ ಕಂಡುಬರುತ್ತಿಲ್ಲ. ಉದಾಹರಣೆಗಾಗಿ ಬಡ ಜನರೇ ಜಾಸ್ತಿ ಮತ ಕೊಟ್ಟು ತಮ್ಮನ್ನು ಆರಿಸಿದ್ದಾರೆ ಎಂದು ಹೇಳಿದ್ದೀರಾ,

ಆದರೆ ಬಡಜನರಿಗಾಗಿ ಸಹಾಯವಾಗುವಂತಹ ವಿಚಾರಗಳು ಇದರಲ್ಲಿ ಬಹಳ ಕಡಿಮೆ ಇವೆ. ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ಬಜೆಟ್ಟಿನಲ್ಲಿ ಒಂದು ಕೋಟಿ ೪೦ ಲಕ್ಷ ರೂಪಾಯಿಗಳನ್ನು ಮೀಸಲಿಟ್ಟಿದೆ. ಆದರೆ ಕೇಂದ್ರ ಸರ್ಕಾರ ಇದೇ ಒಂದು ಅವಧಿಯಲ್ಲಿ ನೂರು ಕೋಟಿ ರೂಪಾಯಿಗಳನ್ನು ಈ ಒಂದು ಹಳ್ಳಿ ಪ್ರದೇಶಗಳಿಗೆ ನೀರು ಸರಬರಾಜು ಮಾಡುವುದಕ್ಕಾಗಿ ಒದಗಿಸಿದೆ. ನಮ್ಮ ಸರ್ಕಾರದವರು ಇಷ್ಟೊಂದು ಕಡಿಮೆ ಹಣ ಒದಗಿಸಿರುವುದು ಬಹಳ ಶೋಚನೀಯವಾದಂಥ ವಿಚಾರವಾಗಿದೆ. ಈ ಸಲದ ಬಜೆಟ್‌ನಲ್ಲಿ ಬಡ ಜನರಿಗಾಗಿ ಪ್ರತಿ ಬಾಬಿಗೆ ಸ್ವಲ್ಪಸ್ವಲ್ಪ ಹಣ ಇಟ್ಟಿರುವುದನ್ನು ನೋಡಿದರೆ, ಅದು ಏನು ಅರ್ಥ ಕೊಡುತ್ತದೆಂದರೆ, ಇಂಗ್ಲೀಷಿನಲ್ಲಿ ಒಂದು ಗಾದೆ ಇದೆ, ಏನೆಂದರೆ: "the proverbial carrot dangling before the horse's or donkey's mouth." ಎಂದು. ಅಂದರೆ ಒಂದು ಕ್ಯಾರೆಟನ್ನು ಇಟ್ಟು ಆ ಪ್ರಾಣಿ ಮುಂದೆ ಹೋಗುವಂತೆ ಮಾಡಲಾಗುತ್ತದೆ. ಆಗ ಅದರ ಯಜಮಾನ ಪ್ರಾಣಿ ಮುಂದೆ ಹೋಗುತ್ತಿದೆ ಎಂದು ಸಮಾಧಾನಪಟ್ಟುಕೊಳ್ಳಬಹುದು. ಆ ಪ್ರಾಣಿಗೂ ಸಹ ತನಗೆ ಮೋಸವಾಗುತ್ತಿದೆ ಎಂಬುದು ತಿಳಿಯುವುದಿಲ್ಲ. ಆದರೆ ಅದರ ಯಜಮಾನ ತನ್ನ ಒಂದು ಸ್ವಾರ್ಥಕ್ಕಾಗಿ ಆ ಪ್ರಾಣಿ ಮುಂದೆ ಹೋಗಲು ಈ ರೀತಿ ಮಾಡುತ್ತಾನೆ. ಇದೇರೀತಿ ಈ ಸರ್ಕಾರದವರು ಬಡಜನರಿಗೆ ಕಡಿಮೆಪ್ರಮಾಣದಲ್ಲಿ ಮನೆಗಳು ಇಲ್ಲವೇ ಗುಡಿಸಲುಗಳನ್ನು ಕಟ್ಟಿಸಿಕೊಡುವಂತಹ ಒಂದು ಚಿಕ್ಕ ಅನುಕೂಲವನ್ನು ಕಲ್ಪಿಸಿಕೊಟ್ಟಿರುವುದು ಪೋಲಿಂಗ್ ಬೂತ್‌ಗೆ ಜನರು ಓಟು ಮಾಡುವುದಕ್ಕೆ ಬರತಕ್ಕಂಥ ಒಂದು ವಿಧಾನ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಲದ ಬಜೆಟ್ಟಿನಲ್ಲಿ ಮತ್ತು ಕಳೆದ ಬಜೆಟ್ಟಿನಲ್ಲಿಯೂ ಸಹ ಶ್ರೀಮಂತರಿಗೇ ಜಾಸ್ತಿ ಅನುಕೂಲವಾಗುವ ವಿಚಾರಗಳೇ ಇವೆ. ಇದರಲ್ಲಿ ಬಡವರಿಗೆ ಬಹಳ ಕಡಿಮೆ ಅನುಕೂಲಗಳಿವೆ. ಬಹುಶಃ ಇದು ಒಂದು ಸಂಪ್ರದಾಯವಾಗಿ ಬಂದಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ೧೯೬೯ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷ ಒಡೆದಮೇಲೆ ಶ್ರೀಮತಿ ಇಂದಿರಾ ಗಾಂಧಿಯವರು ಒಂದು ಸಮಯಕ್ಕೆ ಅರ್ಥಿಕ ಮಂತ್ರಿಗಳೂ ಸಹ ಆಗಿದ್ದರು. ಶ್ರೀ ಮೊರಾರ್ಜಿ ದೇಸಾಯಿ ಅವರನ್ನು ಡಿಸ್‌ಮಿಸ್ ಮಾಡಿದನಂತರ ಶ್ರೀಮತಿ ಗಾಂಧಿಯವರು ಮಂಡಿಸಿದ ಬಜೆಟ್ಟಿನಲ್ಲಿ ಈ ದೇಶದ ಚಿಕ್ಕಮಕ್ಕಳಿಗೆ ಹಾಲು ಕುಡಿಸುವ ಒಂದು ಯೋಜನೆಯನ್ನು ಈ ದೇಶದ ಮುಂದಿಟ್ಟರು. ಅದು ವೃತ್ತಪತ್ರಿಕೆಗಳಲ್ಲಿ ಹೆಡ್-ಲೈನ್ಸ್‌ನಲ್ಲಿ ಬಂತು. ಮತ್ತು ರೇಡಿಯೋದಲ್ಲಿ ಸಹ ಈ ವಿಚಾರ ದಿನಂಪ್ರತಿ ಬಂತು. ಆಗ ಜನರು ಶ್ರೀಮತಿ ಗಾಂಧಿಯವರು ಒಳ್ಳೆಯ ಪ್ರಧಾನಿ, ದೇಶದ ಎಲ್ಲ ಮಕ್ಕಳಿಗೂ ಹಾಲು ಕೊಡುತ್ತಾರೆ ಮತ್ತು ಜನರನ್ನು ಉದ್ಧಾರ ಮಾಡುವುದಕ್ಕಾಗಿ ಇವರು ಬಂದಿದ್ದಾರೆಂದು ಬಹಳ ಸಂತೋಷಪಟ್ಟರು. ಆದರೆ ಇದು ಕೇವಲ ಜನರಿಂದ ಹೆಚ್ಚು ಓಟುಗಳನ್ನು ಗಳಿಸುವುದೇ ಆಗಿತ್ತು. ಇದಕ್ಕೆ ಕಾರಣ ಅವರು ಈ ಬಾಬಿಗೆ ಕೇವಲ ೨ ಕೋಟಿ ರೂಪಾಯಿಗಳನ್ನು ಮೀಸಲಿಟ್ಟರು. ಈ ಎರಡು ಕೋಟಿ ರೂಪಾಯಿಗಳಲ್ಲಿ ದೇಶದ ಎಲ್ಲ ಮಕ್ಕಳಿಗೂ ಒಂದು ವಾರಕ್ಕೆ ಹಾಲು ಕುಡಿಯುವುದಕ್ಕೆ ಸಾಕಾಗುತ್ತಿರಲಿಲ್ಲ. ಈ ಹಣದಿಂದ ೧ ವರ್ಷದಲ್ಲಿ ಶೇಕಡಾ ೨ರಷ್ಟು ಮಕ್ಕಳಿಗೆ ಹಾಲನ್ನು ಕೊಡುವುದಕ್ಕೆ ಸಾಕಾಗುತ್ತಿತ್ತು. ಒಟ್ಟಿನಲ್ಲಿ ಅವರಿಗೆ ಓಟುಗಳು ಸಿಕ್ಕಿದವೇ ಹೊರತು, ಜನರಿಗೆ ಮಾತ್ರ ಇದರಿಂದ ವಿಶೇಷ ಲಾಭವಾಗಲಿಲ್ಲ. ಇದು ಒಂದು ಪದ್ಧತಿಯಾಗಿದೆ. ನೆನ್ನೆ ದಿವಸ ಶ್ರೀಮಾನ್ ಭಾಸ್ಕರ್‌ನಾಯ್ಡು ಅವರು ಮಾತನಾಡುವಾಗ ವಿಜಯನಗರ ಸ್ಟೀಲ್ ಪ್ರಾಜೆಕ್ಟ್ ಬಗ್ಗೆ ಮಾತನಾಡುತ್ತಾ ಇದಕ್ಕೆ ವಿರೋಧಪಕ್ಷದವರ ಬೆಂಬಲ ಬೇಕು, ಇದರ ಕೆಲಸ ಜಾಗ್ರತೆ ಪ್ರಾರಂಭ ಆಗಬೇಕಾದರೆ ನಿಮ್ಮಗಳ ಸಪೋರ್ಟ್ ಬೇಕು ಎಂದು ನಮ್ಮನ್ನು ಕೇಳಿಕೊಂಡರು. ಇದೇ ವಿಚಾರದಲ್ಲಿ ೧೯೭೧ನೇ ಇಸವಿಯಲ್ಲಿ ಚುನಾವಣೆಯಾಗುವುದಕ್ಕೆ ಮುನ್ನ ವೃತ್ತಪತ್ರಿಕೆಗಳಲ್ಲಿ ಕಾನ್‌ಟ್ರವರ್ಸಿಯಲ್ ಸ್ಟೇಟ್‌ಮೆಂಟ್ಸ್ ಬರುತ್ತಿತ್ತು. ವಿಜಯನಗರ, ಹೊಸಪೇಟೆ, ಸೇಲಂ ಮತ್ತು ವಿಶಾಖಪಟ್ಟಣ ಈ ಸ್ಥಳಗಳಲ್ಲಿ ಸ್ಟೀಲ್ ಪ್ಲಾಂಟ್ ಹಾಕುವುದಕ್ಕೆ ಆಗುತ್ತದೆಯೋ ಇಲ್ಲವೋ, ಇದು ಒಂದು ಕಾನ್‌ಟ್ರವರ್ಸಿ, ಆರ್ಟಿಫಿಷಿಯಲ್ ಕಾನ್‌ಟ್ರವರ್ಸಿ ಎಂದು ಹೇಳಬಹುದು, ನಡೆಯುತ್ತಾ ಇತ್ತು. ಅದಕ್ಕನುಗುಣವಾಗಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸ್ಟೀಲ್ ಶಾಖೆಯ ಮಂತ್ರಿಗಳೂ ಸಹ ಅದು ಆಗುವುದಿಲ್ಲ, ಅದು ಫೀಜಬಲ್ ಆಗುವುದಿಲ್ಲ ಎಂದು ಹೇಳಿಕೊಂಡು ಬಂದರು. ಆಮೇಲೆ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಿಯ ರೀತಿಯಲ್ಲಿ ಬಂದರು. ಎಲ್ಲಾವನ್ನೂ ಒಪ್ಪಿಕೊಂಡರು. ಎಲ್ಲವೂ ಬಹಳ ಸಲೀಸಾಗಿ ಆಯಿತು ವಿಜಯನಗರದಲ್ಲಿ ಸ್ಟೀಲ್‌ಪ್ಲಾಂಟ್ ಹಾಕುವುದಕ್ಕೆ ಒಪ್ಪಿಕೊಂಡರು, ಸೇಲಂನಲ್ಲಿ ಹಾಕುವುದಕ್ಕೂ ಒಪ್ಪಿಕೊಂಡರು, ವಿಶಾಖಪಟ್ಟಣದಲ್ಲಿ ಹಾಕುವುದಕ್ಕೂ ಒಪ್ಪಿಕೊಂಡರು. ಇದು ಎಷ್ಟು ಸಲೀಸಾಗಿ ನಡೆಯಿತೆಂದರೆ, ಇಂಗ್ಲೀಷ್‌ನಲ್ಲಿ ಹೇಳಬಹುದಾದರೆ, with the ease of a much delivered mother, Mrs.Gandhi delivered four or five steel mills in the South all at once, just like a woman delivering

quaderplets or quintuplets ಆದರಿಂದ ಎಲ್ಲರಿಗೂ ಸಂತೋಷವಾಯಿತು. ಎಲ್ಲರೂ ಚಪ್ಪಾಳೆ ಹೊಡೆದರು. ಶಾಲಾ ಮಕ್ಕಳು ಗಲಾಟೆ ಮಾಡಿದರೆ ಟೀಚರು ಅಥವಾ ಮೇಡಂ ಅವರಿಗೆ ಪೆಪ್ಪರ್‌ಮೆಂಟ್ ತೋರಿಸಿ, ಸ್ವೀಟ್ ತೋರಿಸಿ ಅವರನ್ನು ಕಂಟ್ರೋಲ್ ಮಾಡುತ್ತಾರೆ. ಆ ತರಹ ಸ್ಟೀಲ್ ಪ್ಲಾಂಟ್ ಹಾಕುವುದಕ್ಕೆ ಒಪ್ಪಿಕೊಂಡಿದ್ದರಿಂದ ಆಡಳಿತ ಪಕ್ಷದವರು ಸಂತೋಷಪಟ್ಟರು, ಹಾಹಾಕಾರ ಮಾಡಿದರು. ಚಪ್ಪಾಳೆ ತಟ್ಟಿದರು. ಚುನಾವಣೆಗೆ ಮುಂಚೆ ಈ ನಿರ್ಧಾರವನ್ನು ತಿಳಿಸಿದ್ದರಿಂದ, ಆದರಿಂದ ಆಡಳಿತ ಪಕ್ಷದವರಿಗೆ ವೋಟು ಬಂತು. ಸ್ಟೀಲ್‌ಪ್ಲಾಂಟ್ ಹಾಕುವ ತೀರ್ಮಾನ ವನ್ನು ತೆಗೆದುಕೊಂಡು ೭ ವರ್ಷಗಳಾದುವು. ಅದೇ ೭ ವರ್ಷಗಳಲ್ಲಿ ಬೊಕಾರೊ ಸ್ಟೀಲ್‌ಪ್ಲಾಂಟಿಗೆ ಸುಮಾರು ೮೦೦ ಕೋಟಿ ರೂಪಾಯಿಗಳು ಖರ್ಚಾಗಿದೆ. ಆದರೆ ಅಷ್ಟೇ ೮೦೦ ಕೋಟಿ ರೂಪಾಯಿ ಖರ್ಚಾಗಬೇಕಾದ ವಿಜಯನಗರ ಸ್ಟೀಲ್‌ಪ್ಲಾಂಟಿಗೆ ಈವರೆಗೆ ಈ ೭ ವರ್ಷಗಳಲ್ಲಿ ೨ ಕೋಟಿ ರೂಪಾಯಿ ಗಳೂ ಸಹ ಖರ್ಚಾಗಿಲ್ಲ. ಹಿಂದೆ ಪ್ರಧಾನಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ವಿಜಯನಗರ ದಲ್ಲಿ ಸ್ಟೀಲ್‌ಪ್ಲಾಂಟ್ ಹಾಕಲು ಒಪ್ಪಿಕೊಂಡು ೭ ವರ್ಷಗಳಾಗಿದ್ದರೂ ಕೂಡ ಅದಕ್ಕೆ ಏತಕ್ಕೆ ಹಣವನ್ನು ಕೊಡಲಿಲ್ಲ ಮತ್ತು ಖರ್ಚು ಮಾಡಲಿಲ್ಲ ? ಈ ರೀತಿ ಜನರನ್ನು ಫೂಲ್ ಮಾಡುವ ಪ್ರಯತ್ನವನ್ನು ಸರ್ಕಾರದವರು ಮಾಡಿದರೆ ಅದರಿಂದ ಜನಗಳಿಗೆ ಯಾವ ಉಪಯೋಗವೂ ಆಗುವುದಿಲ್ಲ. ಸುಮ್ಮನೆ ಜನರಿಗೆ ಆಶ್ವಾಸನೆಯನ್ನು ಕೊಟ್ಟು ವೋಟು ಪಡೆದುಕೊಳ್ಳುವ ವಿಚಾರ ಆಗಬಾರದು. ಈ ಬಡ್ಜೆಟ್ಟಿ ನಲ್ಲಿ ಕೆಲವು ವಿಚಾರಗಳು ಇವೆ. ಅವುಗಳನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ.

Sri K. Bhaskar Naidu (Bellary). —Yesterday I suggested about the Steel plants because in 1964 somebody as Steel Minister wanted the Steel plant to be taken to Andhra because he was an Andhra. Now there is somebody who is Orissa. He may take it to Orissa. That is why I requested as a whole that we in Karnataka should fight for this industry. That is why I had asked for the co-operation of my friends.

Sri. Michael B. Fernandes.—That co-operation you will certainly get. I am pleading that political stunts should not be played for getting votes. ಈಗ ಬಡ್ಜೆಟ್ಟಿನಲ್ಲಿ ನಿರುದ್ಯೋಗವನ್ನು ನಿವಾರಣೆ ಮಾಡುವ ಬಗ್ಗೆ ಸರ್ಕಾರ ದವರು ಏನು ಕ್ರಮ ತೆಗೆದುಕೊಂಡಿದ್ದಾರೆ ? ನಿರುದ್ಯೋಗಿಗಳು ಪಟ್ಟಣಗಳಲ್ಲಿಯೂ ಇದ್ದಾರೆ. ಹಳ್ಳಿ ಗಳಲ್ಲಿಯೂ ಇದ್ದಾರೆ. ೧೫೦ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ನಿರುದ್ಯೋಗಿ ಪೋಸ್ಟ್ ಗ್ರಾಜುಯೇಟ್ಸ್ ಡಿಪ್ಲೊಮಾ ಹೋಲ್ಡರುಗಳು ಏನಿದ್ದಾರೆ ಅವರಿಗೆ ಮಾತ್ರ. Only for those postgraduates or graduates whose families have no income. If their families have no income certainly they could not have become postgraduates, excepting a few rare cases. From such families hardly anybody goes beyond the primary school stage. It is said that the proposed stipendary scheme will help about 12,000 unemployee post-graduates etc. Is there any survey made to findout how many post-graduates and diploma holders are there in such families who have no income ? All these are contradi tions in terms. Now, instead of earmarking this Rs. 2½ crores like this, why can't this money be utilised in villages ? You can use of this money for co-operative ventures to be started by unemployed persons so that they do not come to the cities where unemployment is growing. ಆದುದರಿಂದ ಇದು ಒಂದು ನಾಟಕ ಎಂದು ನಾನು ತಿಳಿದುಕೊಂಡಿದ್ದೇನೆ ಈ ಬಾಬಿಗೆ ೨½ ಕೋಟಿ ರೂಪಾಯಿಗಳನ್ನು ಏನು ಒದಗಿಸಿದ್ದಾರೆ ಇದು ಆ ತರಹ ಒಂದು ಪ್ರೊಗ್ರೆಸಿವ್ ಮೆಜರ್ ಆಗುವುದಿಲ್ಲ. ಇದು ಒಂದು ಸ್ಟಂಟ್ ತರಹ ಕಾಣು ತ್ತದೆ. ಇದನ್ನು ಮಾಡುವುದು ಸರಿಯಲ್ಲ. ಇವರು ಬಡೆಟ್ಟಿನಲ್ಲಿ ಒಳ್ಳೆಯ ರೀತಿಯಲ್ಲಿ ಖರ್ಚು ಮಾಡಲು ಹಣವನ್ನು ಒದಗಿಸಿಲ್ಲ.

ಪ್ರೈಮರಿ ಸ್ಕೂಲುಗಳಿಗೆ ಗ್ರಾಜುಯೇಟ್ಸ್ ಹಾಕಿ ಪ್ರೈಮರಿ ಸ್ಕೂಲು ಟೀಚರುಗಳಿಗೆ ಒಂದು ವರ್ಷ ಅಸಿಸ್ಟ್ ಮಾಡಬೇಕು ಎಂದು ಮಾಡಿದ್ದಾರೆ. ಗ್ರಾಜುಯೇಟ್ಸ್ ಪ್ರೈಮರಿ ಸ್ಕೂಲು ಟೀಚರುಗಳಿಗೆ ಅಸಿಸ್ಟ್ ಮಾಡುವುದು ಎಂದರೆ ಏನು ? You are planning to give this money at the rate of Rs. 150 every month. Instead, let it be given in advance in a lump and let them become self-employed, by using this money in a co-operative manner ಹಳ್ಳಿಗಳಲ್ಲಿ ಬಡ ಅಗ್ರಿಕಲ್ಚರಲ್ ಲೇಬರರ್ಸ್ ಇದ್ದಾರೆ. ಅವರಿಗೆ ಪ್ರಾವಿಡೆಂಟ್ ಫಂಡ್ ಮತ್ತು ಪೆನ್‌ಷನ್ ಏನೂ ತರಿಸಿ ಕೊಟ್ಟಿಲ್ಲ. ಈಗ ನೀವು ಅವರಿಂದ ವೋಟು ತೆಗೆದುಕೊಂಡಿದ್ದೀರಿ, ಸೋಷಿಯಲಿಜಮ್ ಒಪ್ಪಿಕೊಂಡಿದ್ದೀರಿ. ಆದರೆ there are no socialist measures for these people in this budget. You are only talking of socialism, but very little is done to bring it about. ಈಗ ಕಾಮಗಾರಿ ಕೆಲಸಕ್ಕೆ ಬಹಳ ಹಣವನ್ನು ಮೀಸಲಾಗಿಟ್ಟಿದೆ. ಈ ಕೆಲಸವನ್ನು ಯಾರು ಮಾಡುತ್ತಾರೆ ? ಕಂಟ್ರಾಕ್ಟರುಗಳು ಈ ಕೆಲಸವನ್ನು ಮಾಡಿಸುತ್ತಾರೆ. ಬಡಜನಗಳಿಂದ ಈ ಕಂಟ್ರಾಕ್ಟರುಗಳು ಕೆಲಸವನ್ನು ಮಾಡಿಸಿ ಅವರಿಗೆ ಸಂಬಳವನ್ನು ಕೊಡುವುದು ಬಹಳ ಕಡಿಮೆ. ಪೇಪರ್‌ನಲ್ಲಿ ಒಂದು ವೇತನ ದರ ತೋರಿಸುತ್ತಾರೆ. ಕೊಡುವುದು ಇನ್ನೊಂದು. ಕಡಿಮೆ ವೇತನ ಪಡೆಯುವ ಅವರಿಗೆ ಪರ್ಚೇಜಿಂಗ್ ಪವರ್ ಜಾಸ್ತಿ ಇಲ್ಲ. ಇದರಿಂದಾಗಿ ಡಿಮಾಂಡ್ ಕಡಿಮೆಯಾಗಿ, ಪ್ರೊಡಕ್ಷನ್ ಕಡಿಮೆ ಮಟ್ಟದಲ್ಲಿದ್ದು ಎಂಪ್ಲಾಯ್‌ಮೆಂಟಿಗೆ ಅವಕಾಶ ಸಹಾ ಕಡಿಮೆಯಾಗಿರುತ್ತದೆ. ಆದ್ದರಿಂದ ಕಂಟ್ರಾಕ್ಟ್ ಸಿಸ್ಟಂ ಅನ್ನು ರದ್ದು ಮಾಡಬೇಕು. We are talking of socialism. Then, let us nationalise the public works which are at the moment under the Public Works Ministry but are carried out by private contractors, because these contractors who have become richer during the last few years are supporting the ruling party. No one can deny that they have become bigger and they are always supporting the ruling party. ಈ ಬಜೆಟ್ಟಿನಲ್ಲಿ ಸಾಮಾನ್ಯ ಜನಗಳಿಗೆ ಜಾಸ್ತಿ ಸಹಾಯವೇನೂ ಕಂಡುಬರುವುದಿಲ್ಲ. ಪಬ್ಲಿಕ್ ವರ್ಕ್ಸ್‌ನ ಕಾಂಟ್ರಾಕ್ಟ್ ಕೊಡುವುದನ್ನು ನಿಲ್ಲಿಸಿ ಅದನ್ನು ನ್ಯಾಷನಲೈಜ್ ಮಾಡಬೇಕು. ನಿರುದ್ಯೋಗಿ ಪದವೀಧರರಿಗೆ ಯುವಕರಿಗೆ ಕೆಲಸ ಕೊಟ್ಟು ಅವರಿಗೆ ರೂಲ್ಸ್ ಪ್ರಕಾರ ಸಂಬಳವನ್ನು ಕೊಡಬೇಕು. ಆ ರೀತಿ ಮಾಡಿದರೆ ಅವರ ಸ್ಥಿತಿಗತಿಗಳು ಸುಧಾರಣೆಯಾಗುತ್ತದೆ. ಇನ್ನೊಂದು ವಿಷಯವೆಂದರೆ ಚುನಾವಣೆ ಆದ ನಂತರ ಚಿಕ್ಕಪುಟ್ಟ ಕೈಗಾರಿಕೆಗಳಲ್ಲಿ ಕಾರ್ಮಿಕರಿಗೆ ತೊಂದರೆ ಜಾಸ್ತಿಯಾಗಿದೆ. ಕಾರ್ಮಿಕರನ್ನು ಶೋಷಣೆ ಮಾಡುವುದು, ಹೆರಾಸ್ ಮಾಡುವುದು ಮತ್ತಿತರ ರೀತಿಯಲ್ಲಿ ತೊಂದರೆ ಕೊಡುವುದು ಜಾಸ್ತಿಯಾಗಿದೆ. ಇದರ ಬಗ್ಗೆ ಲೇಬರ್ ಖಾತೆಯ ಮಂತ್ರಿಗಳ ಡಿಮ್ಯಾಂಡ್ ಈ ಸಭೆಯ ಮುಂದೆ ಬಂದಾಗ ನಾನು ಮಾತನಾಡುತ್ತೇನೆ.

ಇನ್ನೊಂದು ವಿಷಯ ಏನೆಂದರೆ 20 ಅಂಶಗಳ ಕಾರ್ಯಕ್ರಮಕ್ಕನುಗುಣವಾಗಿ ಕೈಗಾರಿಕೆಗಳಲ್ಲಿ ಅಪ್ರೆಂಟಿಸ್‌ಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಹಿಂದೆ ಕೂಡ ತೆಗೆದುಕೊಂಡಿದ್ದಾರೆ. ಅವರನ್ನು ಖಾಯಂ ಮಾಡುವುದು ಕಾನೂನಿನಲ್ಲಿ ಇಲ್ಲ. ಅವರಿಗೆ ಜಾಸ್ತಿ ಸಂಬಳವನ್ನು ಕೊಡಬೇಕಾಗಿಲ್ಲ ಮತ್ತು ಅವರನ್ನು ಪರ್ಮನೆಂಟ್ ಮಾಡಬೇಕಾಗಿಲ್ಲ. ಅದರಿಂದಾಗಿ they have becoming a source of cheap labour. They are being used as a cheap labour. ಆದ್ದರಿಂದ ಕಡಿಮೆ ಸಂಬಳಕ್ಕೆ ಕೆಲಸಕ್ಕೆ ತೆಗೆದುಕೊಂಡು ಟ್ರೈನಿಂಗ್ ಕೊಡುವ ನೆಪದಲ್ಲಿ ಅವರಿಂದ ಕೆಲಸ ಮಾಡಿಸಿಕೊಂಡಿರುವ ಮೂಲಕ ಮಾಲೀಕ ವರ್ಗದವರು ಬಡಜನಗಳನ್ನು ಶೋಷಣೆ ಮಾಡುವುದನ್ನು ತಪ್ಪಿಸಬೇಕು.

SRI D. DEVARAJ URS.—For an apprentice what is to be given is stated. It is a Central Act. The hon. member must be aware of it.

SRI S.R. BOMMAI.—After the apprenticeship they are not absorbed in this State. In Andhra I understand they are absorbed.

